ತಿಂಗಳ ಪತ್ರಿಕೆ

ಅಕ್ಟೋಬರ್ 2001

ಅಚಲ

ಒಳಗೇನಿದೆ ?

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 10

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾಸಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಯಾವುದು ಭಯೋತ್ಪಾದನೆ

ಇಂದು ಇಡೀ ವಿಶ್ವಕ್ಕೆ ಭಯೋತ್ಪಾದನೆಯ ಪಾಠವನ್ನು ಹೇಳಿಕೊಡಲು ಜಗತ್ತಿನ 'ಹಿರಿಯಣ್ಣ' ಅಮೆರಿಕಾ ಮುಂದೆ ಬಂದಿದ್ದಾನೆ. ಭಯೋತ್ಪಾದನೆಯ ಬಗ್ಗೆ ಪಾಠ ಹೇಳಲು ಅಮೆರಿಕಾಗೆ ಯಾವ ನೈತಿಕ ಹಕ್ಕಿದೆ ಎಂದು ವಿಶ್ವವೇ ನಿಬ್ಬೆರಗಾಗಿ ಕೇಳುತ್ತಿದೆ! ಬಹಿರಂಗವಾಗಿ ಕೇಳಲು ಧೈರ್ಯವಿಲ್ಲದವರೂ ಹೆದರಿಕೆಯಿಂದ ಮನಸ್ಸಿನಲ್ಲಿಯೇ ಹಿರಿಯಣ್ಣನ ಮಾತಿಗೆ ತಲೆದೂಗುತ್ತಿರಬಹುದು.

ಚಿಲಿಯಲ್ಲಿ ಅಲೆಂಡೆಯನ್ನು ಕೊಲೆಮಾಡಿದ, ಕ್ರಾಂತಿಕಾರಿ ಚೆಗೆವಾರನನ್ನು ಕೊಂದು ಹಾಕಿದ, ಕಾಶ್ಮೀರದಲ್ಲಿ ಉಗ್ರರಿಗೆ ಬೆಂಬಲ ನೀಡುತ್ತಿರುವ, ಅಮೆರಿಕಾದ ಕಪ್ಪುಪಟ್ಟಿ ದೀರ್ಘವಾದದ್ದೇ. ಹಿರೋಷಿಮಾ-ನಾಗಸಾಕಿಯ ಮೇಲೆ ಬಾಂಬು ಒಗೆದು ಅದರ ಕಹಿಪರಿಣಾಮ ಇಂದಿಗೂ ಆ ದೇಶದ ಜನತೆ ಅನುಭವಿಸುವಂತಾಗಿರುವುದಕ್ಕೆ ಕಾರಣ ಅಮೆರಿಕಾ. ಹೀಗೆ ವಿಯೆಟ್ನಾಂ, ಕ್ಯೂಬಾ, ಪ್ಯಾಲೆಸ್ತೈನ್, ಪನಾಮಾ... ಇನ್ನೂ ಹಲವಾರು ಚಿಕ್ಕ ಪುಟ್ಟ ರಾಷ್ಟ್ರಗಳಿಗೆಲ್ಲಾ ಭಯೋತ್ಪಾದಕನಾಗಿ ವರ್ತಿಸಿದ ಅಮೆರಿಕಾಗೆ ಮೊದಲ ಬಾರಿಗೆ ಎದಿರೇಟು ಬಿದ್ದಿದೆ. ಹಿಂದೆ ಸಮಾಜವಾದವನ್ನು ಬಗ್ಗು ಬಡಿಯಲು ಧಾರ್ಮಿಕ ಮೂಲಭೂತವಾದದ ಅಸ್ತ್ರವಾಗಿ ಲಾಡೆನ್‌ನ್ನು ಬಳಸಿ, ಬೆಳೆಸಿದ ಅಮೆರಿಕಾ ಸರ್ಕಾರಕ್ಕೆ ಇಂದು ಲಾಡೆನ್ ಭಸ್ಮಾಸುರನಾಗಿದ್ದಾನೆ, ಅಮೆರಿಕಾದ ಅಹಂಕಾರದ ಪ್ರತೀಕವಾದ ವಿಶ್ವವ್ಯಾಪಾರ ಕೇಂದ್ರ ಮತ್ತು ಪೆಂಟಗನ್ನಿಗೇ ಬೆಂಕಿಯಿಟ್ಟಿದ್ದಾನೆ. ಅಮೆರಿಕಾ ತಾನೇ ಮಾಡಿಕೊಂಡ ತಪ್ಪಿಗೆ ಬೇರೆಯವರನ್ನು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಕರೆಯುತ್ತಿದೆ. ವಿಶ್ವದ ಅತ್ಯಂತ ದೊಡ್ಡ ಭಯೋತ್ಪಾದಕನಾದ ಅಮೆರಿಕಾ, ತನ್ನ ಪ್ರತಿಷ್ಠೆಯನ್ನು ಮೇಲೆತ್ತಲು ತಾಲಿಬಾನ್ ಸರ್ಕಾರದ ವಿರುದ್ಧ ಸಮರ ಸಾರಿದೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದ ಪ್ರಯೋಗ!

ವಿಶ್ವ ವ್ಯಾಪಾರ ಕೇಂದ್ರಕ್ಕೆ ಬೆಂಕಿ ಬಿದ್ದಾಗ ಅದು ವಿಶ್ವದ ಜನತೆಗೇನೂ ಸಂತೋಷ ತರುವ ವಿಷಯವಾಗಿರಲಿಲ್ಲ. ಆ ಅನಾಹುತದಲ್ಲಿ ಮಡಿದ ನಾಗರೀಕರ ಬಗ್ಗೆ, ಅವರ ಕುಟುಂಬಗಳಿಗೆ ಉಂಟಾದ ನಷ್ಟದ ಬಗ್ಗೆ ಎಲ್ಲರಿಗೂ ಸಂತಾಪವಿದೆ. ಆದರೆ ಶಾಂತಿಪ್ರಿಯ ಜನತೆಯ ಮುಂದೆ ಇರುವ ಪ್ರಶ್ನೆಯೊಂದೇ! ಈ ಅನಾಹುತಕ್ಕಿಂತಲೂ ನೂರು ಪಟ್ಟು ಹೆಚ್ಚು ಪ್ರಾಣ ಹಾನಿ, ಆಸ್ತಿಹಾನಿಯನ್ನು ಸೆರ್ಬಿಯಾ, ಇರಾಕ್, ಕ್ಯೂಬಾ, ಲಿಬ್ಯಾ, ಉತ್ತರ ಕೊರಿಯಾದಂತಹ ದೇಶಗಳಲ್ಲಿ ಅಮೆರಿಕಾ ಉಂಟುಮಾಡಿದಾಗ ವಿಶ್ವದ ಸಂತಾಪವೇಕೆ ಒಕ್ಕೊರಲಿನಿಂದ ಮೂಡಿಬರಲಿಲ್ಲ? ವಿಶ್ವ ಸಂಸ್ಥೆಗಿಂತ ತಾನೇ ದೊಡ್ಡವ ಎಂದು ಕೊಂಡಿರುವ ಅಮೆರಿಕಾ ಸರ್ಕಾರದ್ದು ಈಗ ಒಂದೇ ಮಾತು, ಒಂದೇ ಕ್ರಿಯೆ. ಅದನ್ನು ವಿಶ್ವದ ಜನತೆಯೆಲ್ಲವೂ ನಡೆಸಿಕೊಡಬೇಕು, ಎನ್ನುವ ನಡವಳಿಕೆ - ಎಷ್ಟು ಸರಿ?

ವಿಶ್ವದ ಈ ವಿದ್ಯಮಾನ ದೇಶ ದೇಶಗಳ ಎಲ್ಲೆಯನ್ನು ವ್ಯಾಪಿಸಿಕೊಂಡು, ಈಗ ನಮ್ಮ ಮನೆಯ ಬಾಗಿಲಿಗೂ ಒತ್ತರಿಸಿಕೊಂಡು ಬಂದಿದೆ. ಅಧಿಕಾರಮದಕ್ಕೆ ಸಾಮ್ರಾಜ್ಯಶಾಹಿಯ ಠೇಂಕಾರವೂ ಕೂಡಿಬಂದರೆ ವಿವೇಚನೆಯೇ ಇಲ್ಲವಾಗುತ್ತದೆ ಎಂಬುದು ನಮ್ಮ ಇತ್ತೀಚಿನ ಅನುಭವವಾಗಿದೆ.

ಕರ್ನಾಟಕದಲ್ಲಿ ಕಳೆದ ತಿಂಗಳುಗಳಿಂದೀಚೆಗೆ ನಡೆಯುತ್ತಿರುವ ವಿದ್ಯಮಾನಗಳು ಯಾವ ಭಯೋತ್ಪಾದನೆಗೂ ಕಡಿಮೆಯಿಲ್ಲ. ದಿನಬೆಳಗಾದರೆ 'ನೀರಾ ಚಳುವಳಿಯ' ಹೆಸರಿನಲ್ಲಿ ರೈತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಪೋಲೀಸರ ಪರಾಕ್ರಮದ ಕುರುಹಾಗಿವೆ. ಅನಗತ್ಯವಾಗಿ ಗೋಲಿಬಾರ್ ನಡೆಸಿ ರೈತರ ಪ್ರಾಣಹಾನಿಗೆ ಕಾರಣವಾದ ಪೋಲಿಸ್ ಇಲಾಖೆ ಮತ್ತು ಇಂದಿನ ಆಳುವ ಸರ್ಕಾರದ ಕ್ರಮಗಳು ಯಾವ ಭಯೋತ್ಪಾದನೆಗೆ ಕಡಿಮೆ? ಇತ್ತೀಚೆಗೆ ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪೋಲೀಸರು ನಡೆಸಿರುವ ದಾಂಧಲೆ ಯಾವ ಚುನಾಯಿತ ಸರ್ಕಾರಕ್ಕೂ ಶೋಭೆ ತರುವಂತಹುದಲ್ಲ. ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮ ನಾಡನ್ನು ಮಾರಲು ಹೊರಟಿರುವ ಮುಖ್ಯಮಂತ್ರಿಗಳಿಗೆ ಇಲ್ಲಿನ ಜನರ ಅಂತಸ್ಸತ್ವದ ಬೆಲೆಯಾಗಲೀ, ಮಾನವೀಯ ಮೌಲ್ಯವಾಗಲೀ ಅರ್ಥವಾಗುವುದಾದರೂ ಹೇಗೆ?

ನಗರದ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿನ ನೂರು ಎಕರೆ ಜಮೀನನ್ನು ಸರ್ಕಾರ ಜೈವಿಕ ತಂತ್ರಜ್ಞಾನ ಉದ್ಯಾನವನದ ನಿರ್ಮಾಣಕ್ಕೆ ನೀಡುವುದನ್ನು ವಿದ್ಯಾರ್ಥಿ ವರ್ಗ ಮತ್ತು ಸಿಬ್ಬಂದಿ ವರ್ಗ ಪ್ರತಿಭಟಿಸುತ್ತಿದ್ದಾಗ ಸ್ಥಳಕ್ಕೆ ಧಾವಿಸಿದ ಪೋಲೀಸರು ಪ್ರತಿಭಟನಕಾರರನ್ನು ಮಾತ್ರವಲ್ಲದೆ, ವಿದ್ಯಾರ್ಥಿ ನಿಲಯಗಳಲ್ಲಿದ್ದವರನ್ನು, ಕಾಯಿಲೆಯಿಂದ ಮಲಗಿದ್ದವರನ್ನು, ಬಸ್‌ಗಾಗಿ ಕಾಯುತ್ತಿದ್ದವರನ್ನು, ಹಾದಿ ಬದಿಯಲ್ಲಿ ಓಡಾಡುತ್ತಿದ್ದವರನ್ನು, ತರಗತಿಗಳಲ್ಲಿ, ಲೈಬ್ರರಿಯಲ್ಲಿದ್ದ ಸಿಬ್ಬಂದಿಗಳನ್ನು ಹಿಡಿದು, ಚಚ್ಚಿ ತಮ್ಮ ರೌದ್ರಾವತಾರವನ್ನು ತೋರಿದ್ದಾರೆ. ಜನತಾ ಸರ್ಕಾರದಲ್ಲಿ ಬಾಗೂರು ನವಿಲೆಯ ಸಂತ್ರಸ್ಥರಿಗೆ ಆಗಿನ ಪೋಲೀಸರು ನೀಡಿದ ಉಪಚಾರವನ್ನೇ ಕಾಂಗ್ರೆಸ್ ಸರ್ಕಾರವು ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿದ್ದವರಿಗೆಲ್ಲಾ ಉಣಬಡಿಸಿದೆ. ಈ ಲಾಠಿ ಪ್ರಹಾರದಲ್ಲಿ ಥಳಿಸಿಕೊಂಡ ನೂರು ಮಂದಿಯಲ್ಲಿ ನಲವತ್ತು ಮಂದಿ ಮಹಿಳೆಯರು, ಹೆಣ್ಣುಮಕ್ಕಳೂ ಸೇರಿದ್ದಾರೆ. ಪ್ರತಿಭಟನಾ ಪ್ರದರ್ಶನ ಪ್ರಜಾಪ್ರಭುತ್ವದ ಅಸ್ತ್ರಗಳಲ್ಲೊಂದು. ಈ ಮೂಲಭೂತ ಅಸ್ತ್ರವನ್ನೇ ನಾಶಮಾಡ ಹೊರಟ ಅಧಿಕಾರಿಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ ಭಯೋತ್ಪಾದಕರೆನ್ನದೆ ಏನೆನ್ನಬೇಕು?

- ಎನ್. ಗಾಯಿತ್ರಿ

ಇತಿಹಾಸದಾಳದ ಗಣಿತಜ್ಞೆ - ಮೇರಿ ಗೆತಾನಾ ಆಗ್ನೇಸಿ (1718 - 1799)

ಮೇರಿ ಇಟಲಿಯ ಮಿಲಾನ್‌ನಲ್ಲಿ ಹುಟ್ಟಿದ್ದಳು. ಹೆಂಗಸರಿಗೆ ವಿದ್ಯಾಭ್ಯಾಸ ಅನಗತ್ಯವೆಂದು ಭಾವಿಸಿದ್ದ ಕಾಲ. ಮೇಲ್ವರ್ಗದ ಮಹಿಳೆಯರಿಗೂ, ಬಹಳಷ್ಟು ಬಾರಿ ಓದು ಬಾರದಿದ್ದ ಕಾಲ. ಹೆಂಗಸರು ಪುಸ್ತಕಗಳನ್ನು ಓದಿದರೆ ಕೆಟ್ಟು ಹೋಗುವರೆಂಬ ಸಾರ್ವತ್ರಿಕ ಭಾವನೆ. ಹೆಂಗಸರು ಅಂದವಾಗಿ ಅಲಂಕರಿಸಿಕೊಂಡು ಕಾಲ ಕಳೆದರಾಯಿತೆಂದು ತಿಳಿದಿದ್ದ ಸಮಯ. ಇಟಲಿಯಲ್ಲಿಯೂ ಫ್ರಾನ್ಸಿನಂತೆ ಐದು ವರ್ಷಕ್ಕೆ ಹೆಣ್ಣು ಮಕ್ಕಳನ್ನು ಕಾನ್ವೆಂಟಿಗೆ ಕಳುಹಿಸುತ್ತಿದ್ದರು. ಅಲ್ಲಿ ವಿವಾಹಕ್ಕಾಗಿ ಕಾಯುವುದಷ್ಟೇ ಅವರ ಕೆಲಸವಾಗಿರುತ್ತಿತ್ತು. ಕಾನ್ವೆಂಟುಗಳಲ್ಲಿ ಒಂದಿಷ್ಟು ಹೊಲಿಗೆ, ಅಲ್ಪ ಸ್ವಲ್ಪ ಓದು - ಬರಹ ಸಾಮಾಜಿಕ ನಡವಳಿಕೆಯ ರೀತಿ ನೀತಿಗಳನ್ನು ಹೇಳಿಕೊಡಲಾಗುತ್ತಿತ್ತು. ಬುದ್ಧಿವಂತಿಕೆ ಹೆಣ್ಣುಮಕ್ಕಳಿಗೆ ಅನಗತ್ಯದ್ದು ಎಂದು ಭಾವಿಸಿದ್ದರು. ಇಂಥಾ ಪರಿಸರದಲ್ಲೂ ಮನೆಯವರು ತಡೆಯದಿದ್ದಾಗ ಗಂಡು ಮಕ್ಕಳಿಗೆ ಪಾಠ ಹೇಳಿಕೊಡಲು ಮನೆಗೇ ಬರುವ ಪ್ರಾಧ್ಯಾಪಕರ ಲಾಭ ಪಡೆದು ಅನೇಕ ಮಹಿಳೆಯರು ವಿದ್ಯಾಭ್ಯಾಸ ಪಡೆದರು. ಇದು ಕೇವಲ ಮೇಲ್ವರ್ಗದ ಮಹಿಳೆಯರಿಗೆ ಮಾತ್ರ ಸಾಧ್ಯವಿತ್ತು.

ಮೇರಿಯ ತಂದೆ ಪೀಟ್ರೊ ಆಗ್ನೇಸಿ ಓರ್ವ ಗಣಿತಜ್ಞ. 21 ಮಕ್ಕಳಲ್ಲಿ ಹಿರಿಯವಳಾದ ಮೇರಿ 1718ರಲ್ಲಿ ಹುಟ್ಟಿದಾಗ ಆಕೆಯ ತಂದೆ ಬಲೋನ್ಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾಗಿದ್ದ. ಶ್ರೀಮಂತ ಸುಸಂಸ್ಕೃತ ಕುಟುಂಬ ಅವರದು. ಮೇರಿ ಪ್ರತಿಭಾವಂತ ಹುಡುಗಿ. ಆಕೆಯ ಪ್ರತಿಭೆಯ ಬಗ್ಗೆ ತಂದೆಗೆ ಎಲ್ಲಿಲ್ಲದ ಅಭಿಮಾನ. ಗಣಿತಜ್ಞ ತಂದೆಯ ಪ್ರೋತ್ಸಾಹದಿಂದ ಮೇರಿ ವಿದ್ಯಾಭ್ಯಾಸವನ್ನು ಪಡೆಯಲು ಫ್ರೆಂಚ್ ಭಾಷೆಯಲ್ಲಿ ಮಾತನಾಡಬಲ್ಲವಳಿದ್ದಳು. ಒಂಭತ್ತನೇ ವಯಸ್ಸಿಗೆ ಗ್ರೀಕ್, ಹೀಬ್ರೂ, ಫ್ರೆಂಚ್, ಸ್ಪಾನಿಷ್ ಮತ್ತಿತರ ಭಾಷೆಗಳನ್ನು ಮೇರಿ ಕಲಿತಳು. ಎಳೆಯ ವಯಸ್ಸಿನೇ ಈ ಹುಡುಗಿ ಲ್ಯಾಟಿನ್ ಭಾಷೆಯಲ್ಲಿ ಮಹಿಳೆಯರ ವಿದ್ಯಾಭ್ಯಾಸದ ಹಕ್ಕಿನ ಬಗ್ಗೆ ಒಂದು ಗಂಟೆಯ ಪ್ರವಚನ ನೀಡಿದ್ದಳು ! ಲ್ಯಾಟೀನ್ ಭಾಷೆಯ ಮೇಲಿನ ಆಕೆಯ ಪ್ರಭುತ್ವ ಅದ್ಭುತವಿತ್ತು. ಆಕೆಯಿದ್ದ ಕಾಲದಲ್ಲಿ ವಿದ್ವಾಂಸರೆಲ್ಲ ಬಳಸುತ್ತಿದ್ದ ಭಾಷೆ ಲ್ಯಾಟೀನ್. ಆಕೆಯ ಮನೆಯಲ್ಲಿ ಇಟಲಿ ಮತ್ತು ವಿದೇಶಗಳಿಂದ ಅನೇಕ ವಿಚಾರವಂತರು, ವಿದ್ವಾಂಸರು ಬರುತ್ತಿದ್ದು, ಅವರೆಲ್ಲರೊಡನೆ ಮೇರಿ ಅವರವರ ಭಾಷೆಯಲ್ಲಿ ಸಲೀಸಾಗಿ ಗಣಿತ ಹಾಗೂ ತತ್ತ್ವಜ್ಞಾನದ ಚರ್ಚೆಗಿಳಿಯುತ್ತಿದ್ದಳು. ಮೇರಿ ಅನೇಕ ಭಾಷೆಗಳಲ್ಲಿ ಅನೇಕ ವಿಷಯಗಳನ್ನು ಕುರಿತು ಪ್ರವಚನಗಳನ್ನು ನೀಡಿದಳು. ಆದರೆ ಇಪ್ಪತ್ತೊಂದನೇ ವಯಸ್ಸಿಗೆ ಮೇರಿ ಬರುತ್ತಿದ್ದಂತೆ ಮನೆಯ ಈ ಸಮಾರಂಭಗಳಿಂದ ದೂರವಾದಳು. ತಾಯಿಯ ಸಾವಿನಿಂದ ಇಡೀ ಮನೆಯ ಉಸ್ತುವಾರಿ ಮೇರಿಯ ಹೆಗಲ ಮೇಲೆ ಬಿದ್ದಿತು. ಅಷ್ಟು ಜನ ಮಕ್ಕಳಿದ್ದ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ತಾನು ವಹಿಸಿಕೊಂಡು ಸಾರ್ವಜನಿಕ ಬದುಕಿನಿಂದ ಮೇರಿ ನಿವೃತ್ತಳಾದಳು. ಅಷ್ಟು ದೊಡ್ಡ ಕುಟುಂಬದ ಆರೈಕೆಯಲ್ಲಿ, ಬೆನ್ನ ಹಿಂದೆ ಹುಟ್ಟಿದ ಮಕ್ಕಳ ಪೋಷಣೆಯ ನಡುವೆಯೂ ಮೇರಿ ತನ್ನ ಮುಂದಿನ 20 ವರ್ಷಗಳನ್ನು ಗಣಿತದ ಅಭ್ಯಾಸದಲ್ಲಿ ತೊಡಗಿಸಿದಳು.

1738ರಲ್ಲಿ ತತ್ತ್ವಶಾಸ್ತ್ರೀಯ ಪ್ರಮೇಯಗಳನ್ನು ಕುರಿತು 'ಪ್ರಪೋಸಿಸ್ಯೋನ್ ಫಿಲಸಾಫಿಕೆ' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದಳು. ಈ ಪುಸ್ತಕ ವಿಜ್ಞಾನ, ತತ್ತ್ವ ಜ್ಞಾನವನ್ನು ಕುರಿತ ಪ್ರಬಂಧ ಮತ್ತು ಚರ್ಚೆಗಳನ್ನು ಒಳಗೊಂಡಿತ್ತು. ತನ್ನ ತಮ್ಮಂದಿರ ಶಿಕ್ಷಣ, ವಿದ್ಯಾಭ್ಯಾಸ ಮೇರಿಗೆ ಬಹಳ ಮುಖ್ಯವಾಗಿತ್ತು. ಆಕೆಯ ಸುಪ್ರಸಿದ್ಧ ಗಣಿತದ ಪುಸ್ತಕದಲ್ಲಿ ಒಂದು, ತನ್ನ ತಮ್ಮಂದಿರಿಗೆ ಗಣಿತ ಕಲಿಸುವ ಕಾರಣಕ್ಕಾಗಿ ಬರೆದದ್ದಾಗಿತ್ತು. ಮೇರಿ ಅವಿವಾಹಿತಳಾಗಿಯೇ ಉಳಿದಳು. ಸಾಕಷ್ಟು ಶ್ರೀಮಂತವಿದ್ದ ಕುಟುಂಬ. ಆದರೆ ಇಪ್ಪತ್ತು ಮಕ್ಕಳ ಜವಾಬ್ದಾರಿಯನ್ನು ಹೊತ್ತು, ಅಚ್ಚುಕಟ್ಟಾಗಿ ಮನೆಯ ನಿರ್ವಹಣೆಯನ್ನು ವಹಿಸಿಕೊಂಡ ಮೇರಿಯ ವಿವಾಹ ಬಹುಶಃ ಯಾರಿಗೂ ಬೇಕಾಗಿರಲಿಲ್ಲ. ಮೇರಿ ತುಂಬಾ ನಿಗರ್ವಿ ಹಾಗೂ ವಿನಯಶೀಲೆ. ಹೆಚ್ಚಿನ ಪ್ರದರ್ಶನಶೀಲಳಲ್ಲದ ಈಕೆ ಬೌದ್ಧಿಕವಾಗಿ ಶ್ರೀಮಂತವಿದ್ದ ಬದುಕಿನಲ್ಲಿ ಖುಷಿ ಕಂಡಳು, ಇತರರ ಸೇವೆಯಲ್ಲಿಯೇ ತೃಪ್ತಳಾದಳು.

ಮೇರಿ ಸುಮಾರು ಇಪ್ಪತ್ತು ವರ್ಷದವಳಿದ್ದಾಗ ಗಣಿತವನ್ನು ಕುರಿತ ಬೃಹತ್ ಗ್ರಂಥದ ಕೆಲಸವನ್ನು ಆರಂಭಿಸಿದಳು. ಸುಮಾರು ಒಂದು ದಶಕದ ಕಾಲ ಆಕೆಯ ಸಂಪೂರ್ಣ ಬೌದ್ಧಿಕ ಗಮನವನ್ನು ಕೇಂದ್ರೀಕರಿಸಿದ ಕೆಲಸವದು. ಆಕೆಯ ತನ್ಮಯತೆ, ಏಕಾಗ್ರತಾ ಶಕ್ತಿ ಅಖಂಡವಿತ್ತು. ಆಕೆಯ ಎಚ್ಚರದ ಹಾಗೂ ನಿದ್ರೆಯ ಕ್ಷಣಗಳಲ್ಲೂ ಮನಸ್ಸು ಸದಾ ತಾನು ಕೆಲಸ ಮಾಡುತ್ತಿದ್ದ ಗಣಿತದ ಸಮಸ್ಯೆಯತ್ತ ಚಿಂತಿಸುತ್ತಿತ್ತು. ಎಷ್ಟೋ ಬಾರಿ ಕಷ್ಟದ ಸಮಸ್ಯೆಯೊಡನೆ ಹಗಲೆಲ್ಲಾ ಗುದ್ದಾಡಿ ಉತ್ತರ ದೊರೆಯದೆ ಸುಸ್ತಾಗಿ ಮಲಗಿದಾಗ, ನಿದ್ರೆಯಲ್ಲಿ ಆಕೆಯ ಮಿದುಳು ಕೆಲಸ ಮುಂದುವರೆಸಿ ತಟ್ಟನೆ ಉತ್ತರ ಹೊಳೆದು, ಹಾಸಿಗೆಯಿಂದೆದ್ದು ಅರೆನಿದ್ರೆಯಲ್ಲೇ ಸಂಪೂರ್ಣ ಉತ್ತರವನ್ನು ಬರೆದಿಟ್ಟು ಮತ್ತೆ

ಹೋಗಿ ಮಲಗುತ್ತಿದ್ದಳು. ಮರುದಿನ ಎದ್ದಾಗ ಆಕೆಯ ಮೇಜಿನ ಮೇಲೆ ಸಮಸ್ಯೆ ಪರಿಹಾರವಾಗಿ ನಿಂತಿರುತ್ತಿತ್ತು!.

ಆಕೆಯ ಎರಡು ಆವೃತ್ತಿಯ **ಅನಲಿಟಿಕಲ್ ಇನ್ಸ್ಟಿಟ್ಯೂಷನ್ಸ್** 1748ರಲ್ಲಿ ಪ್ರಕಟವಾದಾಗ, ಬಹಳಷ್ಟು ಆಸಕ್ತಿ ಕುತೂಹಲವನ್ನು ಹುಟ್ಟಿಸಿತ್ತು. ಪುಸ್ತಕದ ಒಂದು ಭಾಗ ಬೀಜಗಣಿತ ಮತ್ತು ಜಾಮಿತಿಯನ್ನು ಕುರಿತಾಗಿತ್ತು. ಎರಡನೆಯ ಭಾಗ ಕಲನಗಣಿತಕ್ಕೆ ಸಂಬಂಧಿಸಿತ್ತು. ನ್ಯೂಟನ್ ಮತ್ತು ಲಾಯಬ್ನಿಜ್ ಇತ್ತೀಚೆಗಷ್ಟೇ ಕಲನ ಗಣಿತವನ್ನು ಕಂಡು ಹಿಡಿದಿದ್ದರು. ಈ ವಿಷಯವನ್ನು ಕುರಿತ ವಿಚಾರಗಳೆಲ್ಲವೂ ಅನೇಕ ಭಾಷೆಗಳಲ್ಲಿ, ಅನೇಕ ಪ್ರಬಂಧಗಳಲ್ಲಿ ಚದುರಿ ಹೋಗಿದ್ದವು. ಮೇರಿ ಈ ಎಲ್ಲ ವಿಷಯಗಳನ್ನು ಸಂಗ್ರಹಿಸಿ, ಸರಳವಾಗಿ ಸ್ಪಷ್ಟವಾಗಿ ಒಂದೆಡೆ ಕಲೆ ಹಾಕಬಯಸಿದ್ದಳು. ಅದರಲ್ಲಿ ಆಕೆ ಎಷ್ಟು ಯಶಸ್ವಿಯಾದಳೆಂದರೆ, ಆಕೆಯ ಪುಸ್ತಕ ಬಹಳಷ್ಟು ಭಾಷೆಗಳಿಗೆ ಅನುವಾದಗೊಂಡು, ಪಠ್ಯವಾದುದಲ್ಲದೆ, ಸ್ಪಷ್ಟತೆಗೆ ಉತ್ತಮ ಮಾದರಿಯಾಗಿ ಉದಾಹರಿಸಲ್ಪಟ್ಟಿತು. ಈ ಪುಸ್ತಕ ಬೀಜಗಣಿತ, ಜಾಮಿತಿ, ಕಲನಗಣಿತವನ್ನು ಕುರಿತಂತೆ ಪರಿಪೂರ್ಣವಾದ ಸಮಗ್ರ ಕೃತಿ ಎನಿಸಿತು. ಈ ಪುಸ್ತಕದ ಬಹಳಷ್ಟು ಭಾಗ ಸಂಗ್ರಹಿತ ಮಾಹಿತಿಯಾದರೂ, ಮೇರಿ ಅದರಲ್ಲಿ ತನ್ನದೇ ಆದ ಅನೇಕ ಸ್ವಂತದ ಕೊಡುಗೆಯನ್ನೂ ಸೇರಿಸಿದ್ದಳು. ಆಕೆ ಗಣಿತದ ಹೊಸ ವಿಧಾನಗಳನ್ನು ತನ್ನದೇ ಆದ ಸಾರ್ವತ್ರೀಕರಣಗಳನ್ನು ಸೇರ್ಪಡಿಸಿದ್ದಳು. ಈ ಕೃತಿಯ ಪ್ರಕಟಣೆಯ ಯಶಸ್ಸು ಕೇವಲ ಮೇರಿಯ ವೈಯಕ್ತಿಕ ಜಯವಾಗಿರಲಿಲ್ಲ, ಒಟ್ಟು ಮಹಿಳೆಯರ ವಿಜಯವೆನಿಸಿತ್ತು. ಸ್ತ್ರೀಯರು ಗಣಿತದಂಥಾ ವಿಷಯಗಳಲ್ಲೂ ಮಿನುಗುಬಲ್ಲರು ಎಂದು ತೋರಿಸಿದ್ದಳು. ಗಂಡು - ಹೆಣ್ಣಿನ ಬುದ್ಧವಂತಿಕೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲವೆಂದು ಬಿತ್ತರಿಸಿದ್ದಳು.

ತನ್ನ ಈ ಶ್ರೇಷ್ಠ ಕೃತಿಯನ್ನು ಅರ್ಪಿಸಿದ ರೀತಿ ಕೂಡಾ ಸ್ತ್ರೀವಾದೀ ದೃಷ್ಟಿಯಿಂದ ಆಸಕ್ತಿ ಹುಟ್ಟಿಸುತ್ತದೆ. ಆಕೆಯ ಪುಸ್ತಕವನ್ನು ಗೌರವಾನ್ವಿತ ಸಾಮ್ರಾಜ್ಞಿಯಾದ ಆಸ್ಟ್ರಿಯಾದ ಮೇರಿ ತೆರೇಸಾಗೆ ಅರ್ಪಿಸುತ್ತಾ ಸ್ತ್ರೀ ಸಮೂಹಕ್ಕೆ ಮುಕುಟ ಪ್ರಾಯವಾದ, ನಮ್ಮ ಸ್ತ್ರೀಲಿಂಗಕ್ಕೆ ಸೇರಿದವರಷ್ಟು ನನ್ನನ್ನು ಪ್ರೋತ್ಸಾಹಿಸಿದವರು ಬೇರೆ ಯಾರೂ ಇಲ್ಲ. ನನ್ನ ಅದೃಷ್ಟಕ್ಕೆ ನಾನು ಓರ್ವ ಹೆಣ್ಣಾಗಿ ಹುಟ್ಟಿದ್ದೇನೆ. ಈ ನನ್ನ ಸ್ತ್ರೀತ್ವವೇ ನನ್ನೆಲ್ಲ ದುಡಿಮೆಗೆ ಆಧಾರವಾಗಿದೆ. ಮಹಿಳೆ ಅನಂತ ವಿಜ್ಞಾನದ ಆಳಕ್ಕಿಳಿಯಲು ಇದು ಸುವರ್ಣ ಕಾಲ. ಈ ಕಾಲದಲ್ಲಿ ಸ್ತ್ರೀ ವಿಶ್ವಕ್ಕೇ ಮೆಚ್ಚಿನವಳಾಗಿ ಅಭಿಮಾನದಿಂದ ಮೇಲೆದ್ದು ನಿಲ್ಲುತ್ತಾಳೆ. ಈ ಸಮಯದಲ್ಲಿ ಪ್ರತಿ ಹೆಣ್ಣು ತನ್ನ ಸ್ತ್ರೀತನದ ಹಿರಿಮೆಗಾಗಿ ದುಡಿಯಬೇಕು. ತನ್ನ ಪೂರ್ಣ ಪರಿಶ್ರಮವನ್ನು ನೀಡಿ ದುಡಿಯಬೇಕು..... ಎಂದು ಬರೆದಳು.

ಮೇರಿ ಆಗ್ನೇಸಿ ಇಂದಿಗೂ 'ಸೈನು ವಕ್ರ ರೇಖೆ' ಯನ್ನು ಕುರಿತ ಪದ್ಯ ರೂಪದ **ವರ್ಸಿಯೇರಾ** ಎಂಬ ಕೃತಿಗೆ ಪ್ರಸಿದ್ಧಳಾಗಿದ್ದಾಳೆ. ಅಕಾಡೆಮಿ ಫ್ರಾನ್ಸೇಸ್ ಈಕೆಯ ಕೆಲಸವನ್ನು ಮೆಚ್ಚಿದರೂ ಅಕಾಡೆಮಿಗೆ ಪ್ರವೇಶ ನೀಡಲಿಲ್ಲ. ಬಲೋನ್ಯ ವಿಜ್ಞಾನ ಅಕಾಡೆಮಿ ಈಕೆಗೆ ಪ್ರವೇಶ ನೀಡಿತ್ತು. ಮೇರಿ ಅನೇಕ ಗೌರವಗಳಿಗೆ ಪಾತ್ರಳಾಗಿ, ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಳು.

ನಂತರದ ವರ್ಷಗಳಲ್ಲಿ ಮೇರಿ ಬಡವರ ಸೇವೆಗೆ ನಿಂತು ನನ್ ಆದ ಕತೆಗಳಿವೆ. ಆದರೆ ಮೇರಿ ನಿಜಕ್ಕೂ ನನ್ ಆದಳೋ ಇಲ್ಲವೋ ಎಂಬ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ಮೇರಿ ಬಲೋನ್ಯಾ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆದಳು ಎಂಬ ಬಗ್ಗೆ ಕೂಡಾ ವಾದ - ವಿವಾದಗಳಿವೆ. ಆಕೆಯ ತಂದೆಯ ಸಾವಿನ ನಂತರ ಮೇರಿಯನ್ನು ಪೋಪ್ ಬೆನೆಡಿಕ್ಟ್ ಈ ಸ್ಥಾನ ಅಲಂಕರಿಸಲು ಕೇಳಿಕೊಂಡರೆಂದು ತಿಳಿಸುವ ಬಹಳಷ್ಟು ಉಲ್ಲೇಖಗಳಿವೆ. ಹಲವು ಪುಸ್ತಕಗಳು ಆಕೆ ಅಲ್ಲಿ ಗಣಿತ ಮತ್ತು ತತ್ವಶಾಸ್ತ್ರದ ಪ್ರಾಧ್ಯಾಪಕಳಾಗಿದ್ದಳು ಎಂದು ಕೂಡಾ ಉಲ್ಲೇಖಿಸುತ್ತದೆ. ಆದರೆ ಮೇರಿ ತನ್ನದೇ ಸ್ವಇಚ್ಛೆಯಿಂದ ಗಣಿತದ ಉತ್ತುಂಗದಲ್ಲಿದ್ದಾಗಲೇ ನಿವೃತ್ತಳಾದಳು. ದೀರ್ಘ ಕಾಲದ ಬದುಕಿನ ಮೇರಿಯ ಎಂಟು ದಶಕಗಳ ಬದುಕಿನಲ್ಲಿ ಆಕೆಯ ನಲವತ್ತು ವರ್ಷಗಳು ಬಡಜನರ ಸೇವೆಯಲ್ಲಿ ಕಳೆಯಿತು. ತಂದೆಯ ಸಾವಿನ ನಂತರ ಮೇರಿ ತನ್ನ ಮನೆಯನ್ನೇ ಒಂದು ಸಣ್ಣ ಆಸ್ಪತ್ರೆಯಾಗಿ ಪರಿವರ್ತಿಸಿ, ತನ್ನ ಉಳಿದೆಲ್ಲ ಬದುಕನ್ನು ಬಡವರ ಹಾಗೂ ರೋಗಿಗಳ ಸೇವೆಯಲ್ಲಿ ಕಳೆದಳು. 1771ರಲ್ಲಿ ಪಿಯೋ ಇನ್‌ಸ್ಟಿಟ್ಯೂತೋ ತ್ರಿವುಲ್ಲಿಯೋ ತೆರೆಯಲ್ಪಟ್ಟಾಗ ಪ್ರಧಾನ ಬಿಷಪ್ ಈಕೆಯನ್ನು ಅದರ ಮುಖ್ಯಸ್ಥ ಸ್ಥಾನವಹಿಸಲು ಕೇಳಿಕೊಂಡರು. ತನ್ನ ಸಾವಿನವರೆಗೂ ಮೇರಿ ಇಲ್ಲಿ ದುಡಿದಳು.

ಈಕೆ 1799ರಲ್ಲಿ 81ನೇ ವಯಸ್ಸಿನಲ್ಲಿ ತೀರಿಕೊಂಡ್ಡಳು. ಮೇರಿ ಆಗ್ನೇಸಿಯ ಗಣಿತದ ಸಾಮರ್ಥ್ಯ ಪ್ರಶ್ನಾತೀತವಿತ್ತು. ಅಷ್ಟು ಬೇಗನೇ ಗಣಿತದಿಂದ ವಿಮುಖಳಾಗಿ ಹೋಗಿದಿದ್ದರೆ ಮೇರಿ ಬಹುಶಃ ಮಹಾನ್ ಗಣಿತಜ್ಞರ ಸಾಲಿನಲ್ಲಿ ನಿಲ್ಲುತ್ತಿದ್ದಳು. ಮಹಿಳೆ ಸಮಾಜಕ್ಕೆ ನೀಡಬಹುದಾದ ಬೌದ್ಧಿಕ ಕೊಡುಗೆಯ ಉದಾಹರಣೆಯನ್ನು ಮೇರಿಯಲ್ಲಿ ಕಾಣುತ್ತೇವೆ. ಇಪ್ಪತ್ತು ತಮ್ಮ, ತಂಗಿಯರ ದೊಡ್ಡ ಕುಟುಂಬವನ್ನು ಪಾಲಿಸಿ ಪೋಷಿಸುತ್ತಲೇ, ಬೌದ್ಧಿಕ ಚಟುವಟಿಕೆಯಲ್ಲಿ ತೊಡಗಿದ ಈಕೆ, ಸ್ತ್ರೀಯರಿಗೆ ತಮ್ಮ ಕುಟುಂಬ ಜೀವನದ ಒತ್ತಡದ ನಡುವೆಯೂ ಬೌದ್ಧಿಕ ಪರಾಕಾಷ್ಠೆಯನ್ನು ಮುಟ್ಟಲು ಸಾಧ್ಯ ಎಂದು ತೋರಿಸಿದ ಉದಾಹರಣೆಯಾದಳು.

ಲಿಂಗ ತಾರತಮ್ಯವಿಲ್ಲದ ಅರ್ಜಿಗಳು

ಸದ್ದುಗದ್ದಲವಿಲ್ಲದೆ ಶ್ರೀಮತಿ ಎನ್. ಎ. ವಿನಯ ಕೇರಳದ ಮಹಿಳೆಯರಿಗೆ ದೊಡ್ಡ ಜಯವನ್ನು ತಂದು ಕೊಟ್ಟಿದ್ದಾರೆ. 1999ರಲ್ಲಿ ಈಕೆ ಫೈಲ್ ಮಾಡಿದ್ದ 'ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್' ಗೆ ಕೇರಳದ ಹೈ ಕೋರ್ಟ್ ಸಮಾನತೆಯ ಹಾದಿಯಲ್ಲಿ ಮೈಲಿಗಲ್ಲಾಗುವಂತಹ ತೀರ್ಪು ನೀಡಿದೆ. ಎಲ್ಲ ಸರಕಾರಿ ಅರ್ಜಿಗಳು ಲಿಂಗ ತಾರತಮ್ಯದಿಂದ ಮುಕ್ತವಾಗಿರಬೇಕೆಂದು ಆಜ್ಞೆ ಹೊರಡಿಸಿದೆ. ಸೆಪ್ಟೆಂಬರ್ 27, 2001ರ ತೀರ್ಪಿನಲ್ಲಿ ಮುಖ್ಯ ನ್ಯಾಯಧೀಶರಾದ ಬಿ.ಎನ್. ಶ್ರೀಕೃಷ್ಣ ಮತ್ತು ನ್ಯಾಯಧೀಶರಾದ ಎಮ್. ರಾಮಚಂದ್ರನ್ ಅವರು, ಸರಕಾರ ಮುದ್ರಿಸುವ ಪ್ರತಿಯೊಂದು ಅರ್ಜಿಯಲ್ಲಿ ಲಿಂಗಾತೀತ ಪದಗಳ ಪ್ರಯೋಗವಿರಬೇಕು, ಎರಡೂ ಲಿಂಗಗಳಿಗೆ ಅನ್ವಯವಾಗುವಂತಿರಬೇಕು ಎಂದು ಆಜ್ಞೆ ಹೊರಡಿಸಿದ್ದಾರೆ.

ವಿನಯಾ ಕೇರಳದ ಮಹಿಳೆ. ಪ್ರತಿಯೊಂದು ಅರ್ಜಿಯಲ್ಲೂ ತಂದೆಯ ಹೆಸರು ಇಲ್ಲ ಗಂಡನ ಹೆಸರನ್ನು ಕೇಳುವುದು ವಿನಯಾರನ್ನು ತೀರಾ ರೇಗಿಸುತ್ತಿತ್ತು. ವಿನಯಾ ವಾಯನಾಡನ ಅಂಬಾವಲವಾಯಲನಲ್ಲಿ ಪೋಲೀಸ್ ಕಾನಸ್ಟೇಬಲ್ ಆಗಿದ್ದಾರೆ. ತಾಯಿಯ ಹೆಸರನ್ನೇಕೆ ಕೇಳುವುದಿಲ್ಲ. ಮಹಿಳೆಯರು ಸದಾ ಕಾಲಕ್ಕೂ ಯಾರದೋ ಮಗಳಾಗಿ, ಹೆಂಡತಿಯಾಗಿಯೇ ಗುರುತಸಲ್ಪಡಬೇಕೇಂಕೆ ಎಂಬುದು ಆಕೆಯ ವಾದವಾಗಿತ್ತು. ವಿನಯಗೆ ಕಾನೂನಿನ ಆಗಾಧ ಜ್ಞಾನವೇನೂ ಇರಲಿಲ್ಲ. ಆದರೆ ಅನ್ಯಾಯ ನ್ಯಾಯಸಮ್ಮತವಾದದ್ದಲ್ಲ. ಅನ್ಯಾಯವನ್ನು ಕೋರ್ಟಿನಲ್ಲಿ ಪ್ರಶ್ನಿಸಬಹುದು ಎಂದು ತಿಳಿದಿತ್ತು. ನವೆಂಬರ್ 9, 1999ರಂದು ವಿನಯಾ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಹಾಕಿದರು. ನಮ್ಮ ರಾಜ್ಯವ್ಯವಸ್ಥೆ ಪ್ರಜೆಗಳನ್ನು ಲಿಂಗ ತಾರತಮ್ಯದಿಂದ ಮುಕ್ತರನ್ನಾಗಿ ಮಾಡುತ್ತದೆ. ಆದರೆ ನಮ್ಮ ಜನನ ಪತ್ರದಿಂದಲೇ (ಬರ್ತ್ ಸರ್ಟಿಫಿಕೇಟ್) ಈ ಲಿಂಗ ತಾರತಮ್ಯ ಆರಂಭವಾಗುತ್ತದೆ. ಮಗುವಿನ ಬದುಕಿನಲ್ಲಿ ತಾಯಿಯ ಪಾತ್ರವನ್ನೇ ಮರೆಯುತ್ತಾರೆ. ಶಾಲೆ, ಕಾಲೇಜು, ನೌಕರಿಯ ಸ್ಥಳ ಎಲ್ಲೆಡೆಯಲ್ಲೂ ತಂದೆ ಇಲ್ಲವೇ ಗಂಡನ ಹೆಸರನ್ನು ಕೇಳುತ್ತಾರೆ. ಈ ಮೂಲಕ ಮಹಿಳೆಯರು ಎರಡನೇ ದರ್ಜೆಯ ಪ್ರಜೆಗಳಾಗಿದ್ದಾರೆ ಎಂಬುದು ವಿನಯಾರ ವಾದ.

ಇಷ್ಟೇ ಅಲ್ಲ ವಿನಯಾಗೆ ತನ್ನ ಗುರುತಿನ ಚೀಟಿಯಲ್ಲಿ ಮಹಿಳಾ ಪೋಲೀಸ್ ಕಾನಸ್ಟೇಬಲ್ ಎಂದು ಬರೆದಿರುವ ಬಗ್ಗೆಯೂ ಅಸಮಾಧಾನವಿದೆ. ತಾನು ಪೋಲೀಸ್ ಕಾನಸ್ಟೇಬಲ್. ಅದರಲ್ಲಿ ಮಹಿಳೆ ಎಂದು ನಮೂದಿಸುವ ಅಗತ್ಯವಿಲ್ಲ ಎನ್ನುವ ಈಕೆ, ಈ ದಿಕ್ಕಿನಲ್ಲೂ ತನ್ನ ಹೋರಾಟವನ್ನು ಆರಂಭಿಸಿದ್ದಾರೆ. ಪೋಲೀಸ್ ವಿಭಾಗದಲ್ಲಿ ವಿನಯಾ ಸಾಕಷ್ಟು ಅಪ್ರಿಯರಾಗಿದ್ದಾರೆ. ಕಾರಣ, ಪುರುಷರಿಗೆ ಮತ್ತು ಮಹಿಳೆಯರಿಗೆ ಒಂದೇ ಸಮವಸ್ತ್ರವಿರಬೇಕೆಂದು ಇವರ ವಾದ. ಬಹಳಷ್ಟು ಹೆಂಗಸರು ಸೀರೆಯನ್ನು ಇಷ್ಟಪಡುವುದರಿಂದ ಈಕೆಯ ಹೋರಾಟ ಅವರಿಗೆ ಅಪ್ರಿಯವಾಗಿದೆ. ವಿನಯಾ ಇಂದಿಗೂ ಶರ್ಟ್ ಮತ್ತು ಪ್ಯಾಂಟ್ ಹಾಕಿ ಕೆಲಸಕ್ಕೆ ಬರುತ್ತಾರೆ. ಸಂತಸದ ಸುದ್ದಿ ಎಂದರೆ, ವಿನಯಾರ ಪತಿ ಪೋಲೀಸ್ ಕಾನಸ್ಟೇಬಲ್ ಕಲಪೆಟ್ಟಾ, ಪತ್ನಿಯನ್ನು ಸಂಪೂರ್ಣ ಬೆಂಬಲಿಸುತ್ತಾರೆ. ಈ ದಂಪತಿಗಳು ತಮ್ಮ ಮಕ್ಕಳಿಗೆ, ತಾಯಿ ಮತ್ತು ತಂದೆ ಇಬ್ಬರ ಇಷಿಷಿಯಲ್‌ಗಳನ್ನು ಇಟ್ಟಿದ್ದಾರೆ.

ತಾರತಮ್ಯವನ್ನು ತೊಡೆಯಲು ಕೇರಳದಲ್ಲಿ ವಿನಯಾ ಏಕಾಂಗಿಯಾಗಿ ಮಾಡಿದ ಕೆಲಸವನ್ನು ಕರ್ನಾಟಕದಲ್ಲಿ ನಮ್ಮಂತಹ ಸಂಘಟನೆಗಳು ಕೈಗೊಳ್ಳಬೇಕು. ದಶಕಗಳಿಂದ ಮಹಿಳೆಯರು ಉದ್ಯೋಗದಲ್ಲಿರುವ ನಮ್ಮ ಕಾರ್ಖಾನೆಗಳಂತಹ ತಾಣದಲ್ಲೂ, ಗಂಡ ಅಥವಾ ತಂದೆಯ ಹೆಸರನ್ನು ಎಲ್ಲ ಅರ್ಜಿಗಳಲ್ಲೂ ನೋಡುತ್ತೇವೆ. ಅಷ್ಟೇ ಏನು, ಇಂದಿಗೂ ನಮ್ಮ ಕಾರ್ಖಾನೆಯ ಪ್ರಕಾರ ಕುಟುಂಬ ಎಂದರೆ ಹೆಂಡತಿ ಮತ್ತು ಮಕ್ಕಳು ಪ್ರತಿ ಬಾರಿ ಅರ್ಜಿ ತುಂಬುವಾಗ ನನ್ನಂತಹ ಮಹಿಳಾ ನೌಕರರು ಇದನ್ನು ತಿದ್ದಿ ಗಂಡ ಮತ್ತು ಮಕ್ಕಳು ಎಂದು ಮಾಡುತ್ತೇವೆ. ಸಮಾನತೆಯ ಹಾದಿಯಲ್ಲಿ ಒಂದೊಂದು ಸಣ್ಣ ಹೆಜ್ಜೆಯೂ ನಮ್ಮನ್ನು ಗುರಿಯತ್ತ ಅಷ್ಟಷ್ಟು ಹತ್ತಿರಕ್ಕೆ ಕರೆದೊಯ್ಯುತ್ತದೆ.

ನೂರು ವರ್ಷಕ್ಕೂ ಹಿಂದಿನ ಸ್ತ್ರೀವಾದಿ ಕಾದಂಬರಿ

ನೂರು ವರ್ಷಗಳ ಹಿಂದೆಯೇ ಮಹಿಳೆಯರ ವಿದ್ಯಾಭ್ಯಾಸಕ್ಕೆ ಇಂಬು ಕೊಟ್ಟ ಲೇಖಕ ನಾಜಿರ್ ಅಹ್ಮದ್. ಕಳೆದ ಶತಮಾನದಲ್ಲಿ ಈತ ಬರೆದ ಮೊಟ್ಟ ಮೊದಲ ಆಧುನಿಕ ಉರ್ದು ಕಾದಂಬರಿ 1903ರಲ್ಲಿ ಇಂಗ್ಲಿಷ್ ಭಾಷೆಗೆ ಅನುವಾದವಾಗಿತ್ತು. ಪುಸ್ತಕದ ಹೆಸರು 'ದಿ ಬ್ರೈಡ್ಸ್ ಮಿರರ್ - ಟೇಲ್ ಆಫ್ ಲೈಫ್ ಇನ್ ಡೆಲ್ಲಿ ಎ ಹಂಡ್ರೆಡ್ ಇಯರ್ಸ್ ಅಗೋ' ಇದೀಗ ಮತ್ತೊಮ್ಮೆ ಮುದ್ರಣಗೊಂಡು ಹೊರಬಂದಿರುವ ಈ ಪುಸ್ತಕ, ನೂರು ವರ್ಷಗಳ ನಂತರವೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ.

ಹತ್ತೊಂಬತ್ತನೇ ಶತಮಾನದ ಉರ್ದು ಭಾಷೆಯ ಮಹಾನ್ ಗದ್ಯ ಲೇಖಕ ನಾಜಿರ್ ಅಹ್ಮದ್. ನಾಜಿರ್ ಅಹ್ಮದ್, 1836ರಲ್ಲಿ ಬಡ ಕುಟುಂಬದಲ್ಲಿ ಜನಿಸಿದಾತ. ದಿಲ್ಲಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆದು, ಈತ ಡೆಪ್ಯುಟಿ ಕಲೆಕ್ಟರ್ ಸ್ಥಾನಕ್ಕೆ ಏರಿದ. ಸಂಪ್ರದಾಯವಾದಿಯಾದ ಈತನ ತಂದೆ, ಮಗ ಇಂಗ್ಲಿಷ್ ಭಾಷೆ ಕಲಿಯಬಾರದೆಂದು ಕಟ್ಟಾಜ್ಞೆ ಮಾಡಿದ್ದ. ಬಿಳಿಯರ ಭಾಷೆ ಬಾರದಿದ್ದರೂ, 1857ರಲ್ಲಿ ಸ್ವಾತಂತ್ರ ಸಂಗ್ರಾಮದ ಸಮಯದಲ್ಲಿ ಇಂಗ್ಲಿಷ್ ಮಹಿಳೆಯ ಜೀವ ಉಳಿಸಿದ ಕಾರಣಕ್ಕೆ ಈತನಿಗೆ ಸರಕಾರಿ ಕೆಲಸದಲ್ಲಿ ಬಡ್ತಿ ದೊರೆಯಿತು. ಇಲ್ಲಿ ನಾಜಿರ್ ಸ್ವಪ್ರಯತ್ನದಿಂದ ಇಂಗ್ಲಿಷ್ ಕಲಿತ. ಆದಾಯ ತೆರಿಗೆ ನಿಯಮಾವಳಿಗಳನ್ನು ಇಂಡಿಯನ್ ಪೀನಲ್ ಕೋಡ್ ಅನ್ನು ಉರ್ದು ಭಾಷೆಗೆ ಅನುವಾದಿಸಿದ.

ಆಧುನಿಕ ಉರ್ದು ಕಾದಂಬರಿಗೆ ಬುನಾದಿ ಹಾಕಿದ ಈ ಲೇಖಕ ತನ್ನನ್ನು ಎಂದೂ ಕಾದಂಬರಿಕಾರನಾಗಿ ಗಣಿಸಲಿಲ್ಲ. ತನ್ನನ್ನು ಶಿಕ್ಷಣಕಾರನಾಗಿ ಗುರುತಿಸಿಕೊಳ್ಳುತ್ತಿದ್ದ. ಈತ ಮಿರತ್ ಉಲ್-ಅರಸ್ ಅಥವಾ ಬ್ರೈಡ್ ಮಿರರ್ ಕಾದಂಬರಿಯನ್ನು ಬರೆದ. ಇದು ಅಕ್ಬರಿ ಮತ್ತು ಅಸ್ಗರಿ ಎಂಬ ಅಕ್ಕ-ತಂಗಿಯರ ಕತೆ. ಪುಸ್ತಕ ಪ್ರಕಟವಾದದ್ದು 1869ರಲ್ಲಿ. ಹೆಣ್ಣು ಮಕ್ಕಳಿಗೆ ಮಾರ್ಗದರ್ಶಿ ಪುಸ್ತಕವಾಗಿ ಇದು ಪ್ರಕಟವಾಗಿತ್ತು. ಅಕ್ಕ ಅಕ್ಬರಿ ಸಿಲ್ಲಿ ಹುಡುಗಿ. ಅಂದ ಚಂದಗಳಿಗಷ್ಟೆ ಮುಗಿದು ಹೋಗುತ್ತದೆ ಆಕೆಯ ಗುಣಗಾನ. ಆದರೆ ಹದಿಮೂರರ ಎಳೆಯ ವಯಸ್ಸಿಗೇ ಮದುವೆಯಾದರೂ ತಂಗಿ ಅಸ್ಗರಿ ವಿದ್ಯಾವಂತಳು. ತನ್ನ ಬುದ್ಧಿವಂತಿಕೆ, ಜಾಣತನಗಳಿಂದ ಇಡೀ ಕುಟುಂಬಕ್ಕೆ ಸುಖ ಸಂತೋಷ ಸಂಪತ್ತನ್ನು ತರುತ್ತಾಳೆ. ಅಸ್ಗರಿ ರಮ್ಯ ರೊಮ್ಯಾಂಟಿಕ್ ರೀತಿಯಲ್ಲಿ ಹೃದಯಗಳನ್ನು ಗೆಲ್ಲುವುದಿಲ್ಲ. ಅಸ್ಗರಿ ತನ್ನ ಬುದ್ಧಿವಂತಿಕೆ, ತರ್ಕ, ಜಾಣತನ, ವ್ಯವಹಾರಜ್ಞಾನ, ಚತುರತೆಯಿಂದ ಲೆಕ್ಕ ಪತ್ರಗಳನ್ನು ನಿಖರವಾಗಿ ಇಡುವುದರ ಮೂಲಕ ಅಗತ್ಯದ ನಿರ್ಧಾರವನ್ನು ತೆಗೆದುಕೊಳ್ಳುವ ಜಾಣ್ಮೆಯ ಮೂಲಕ, ಸರಿಯಾದ ಸಲಹೆಗಳನ್ನು ನೀಡುವುದರ ಮೂಲಕ ಎಲ್ಲರ ಹೃದಯಗಳನ್ನು ಗೆಲ್ಲುತ್ತಾಳೆ. ಅಸ್ಗರಿ ತನ್ನ ಗಂಡನಿಗೆ ಸರಕಾರಿ ಕೆಲಸವನ್ನು ಗಿಟ್ಟಿಸುವ ರೀತಿಯನ್ನು ಹೇಳಿಕೊಡುತ್ತಾಳೆ. ತನ್ನ ಸಂಪ್ರದಾಯದ ಪರ್ದಾ ತೆಗೆದಿಟ್ಟು ಗಂಡನನ್ನು ಸ್ವೇಚ್ಛಾಚಾರದಿಂದ ಪಾರು ಮಾಡುತ್ತಾಳೆ. ಬಡವಳಾದಳೂ ಉತ್ತಮ ಗುಣದ ತನ್ನ ಗಂಡನ ತಂಗಿಯನ್ನು ಶ್ರೀಮಂತ ಹಕೀಮರ ಕುಟುಂಬ ಸ್ವೀಕರಿಸುವಂತೆ ಮಾಡುತ್ತಾಳೆ. ಈಕೆಯ ಚುರುಕುತನ ಮತ್ತು ಬುದ್ಧಿವಂತಿಕೆ ಈ ಕಾದಂಬರಿಯ ಎಲ್ಲ ಗಂಡು ಪಾತ್ರಗಳನ್ನು ಮೀರಿಸಿ ಮಿಂಚುತ್ತದೆ.

ಈ ಪುಸ್ತಕದಲ್ಲಿ ಮಹಿಳೆಯರನ್ನು ಕುರಿತಂತೆ ಲೇಖಕನಿಗಿರುವ ಗೌರವ ಪುಟ ಪುಟಗಳಲ್ಲಿ ಪ್ರಕಟವಾಗುತ್ತದೆ. ಈ ಸಮಾಜ ಮಹಿಳೆಯರಿಗೆ ಏನೇನೂ ಬೆಲೆ ನೀಡದಿದ್ದರೂ ಮಹಿಳೆಯರೂ ಪುರುಷರಿಗಿಂತ ಯಾವ ರೀತಿಯಲ್ಲೂ ಕೀಳಲ್ಲ, ಎಂಬುದು ಕತೆಯ ಕೇಂದ್ರವಾಗಿದೆ. ಮಹಿಳೆಯರಿಗೆ ತಮ್ಮ ವಿದ್ಯಾಭ್ಯಾಸ ಬುದ್ಧಿವಂತಿಕೆಯ ಮೂಲಕ ಗೌರವವನ್ನು ಗಿಟ್ಟಿಸುವಂತೆ ಕರೆ ನೀಡುತ್ತಾನೆ. ಹುಡುಗರಿಗಿಂತ ವಿದ್ಯಾಭ್ಯಾಸ ಹುಡುಗಿಯರಿಗೆ ಹೆಚ್ಚು ಅಗತ್ಯ ಎಂದು ಮಹಿಳೆಯರಿಗೆ ಕರೆ ನೀಡುತ್ತಾನೆ. ಹಾಗೇಂದೇ ಈ ಕಾದಂಬರಿಯ ಕಥಾನಾಯಕಿ ಅಸ್ಗರಿ ತನ್ನ ಬಿಡುವಿನ ಸಮಯದಲ್ಲಿ ಹುಡುಗಿಯರಿಗೊಂದು ಶಾಲೆ ತೆಗೆಯುತ್ತಾಳೆ. ಇಲ್ಲಿ ಶಾಲೆಯಲ್ಲಿ ಅಸ್ಗರಿ ರಾಣಿ ವಿಕ್ಟೋರಿಯಾ ಇಡೀ ಸಾಮ್ರಾಜ್ಯವನ್ನು ಯಾವ ಗಂಡಸಿಗೆ ಕಡಿಮೆ ಇಲ್ಲದಂತೆ ಆಳುತ್ತಿದ್ದಾಳೆ ಎಂದು ತಿಳಿಸಿ ಹುರಿದುಂಬಿಸುತ್ತಾಳೆ. ನೂರು ವರ್ಷಗಳ ಹಿಂದಿನ ಈ ಕಾದಂಬರಿ ಇವತ್ತಿಗೂ ಪ್ರಸ್ತುತವಿದೆ. ದಿಲ್ಲಿಯ ನೂರು ವರ್ಷಗಳ ಹಿಂದಿನ ಜೀವನದ ಬಗ್ಗೆ ಇಣುಕು ನೋಟ ನೀಡುತ್ತದೆ. ಇಂದಿನ ಪೆಪ್ಸಿ ಕೋಲಗಳಿಗೆ ಬದಲಾಗಿ ಶರ್ಬತ್, ಹಣ್ಣಿನ ರಸಗಳನ್ನು ಕುಡಿಯುತ್ತಿದ್ದ, ಇಡೀ ಒಂದು ಅವಿಬಾಜ್ಯ ಕುಟುಂಬ 15 ರೂಪಾಯಿಯಲ್ಲಿ ತಿಂಗಳು ಪೂರಾ ನಿಬಾಯಿಸುತ್ತಿದ್ದ ಕಾಲದ ಇಣುಕು ನೋಟ ದೊರಕುತ್ತದೆ.

ಮಹಿಳೆಯರ ವಿದ್ಯಾಭ್ಯಾಸಕ್ಕೆ ಒತ್ತು ಕೊಟ್ಟು, ಆಕೆಯ ರೂಪು, ಒಯ್ಯಾರ, ಬೆಡಗು, ಬಿನ್ನಾಣಗಳಿಗಿಂತ ಮುಖ್ಯವಾದದ್ದು ಓದು, ವಿದ್ಯಾಭ್ಯಾಸ, ಸಾಮಾನ್ಯ ಜ್ಞಾನ, ಜಾಣತನ ಎಂದು ಸಾರುವ ಈ ಕಾದಂಬರಿ, ನೂರು ವರ್ಷಗಳ ನಂತರವೂ ಪ್ರಸ್ತುತವಾಗಿದೆ.

ತಾಲಿಬಾನ್ ನಲ್ಲಿ

❑ ಹುಡುಗಿಯರು ಹನ್ನೆರಡು ವರ್ಷಗಳ ನಂತರ ಶಾಲೆಗೆ ಹೋಗುವಂತಿಲ್ಲ. ಓದುವಂತಿಲ್ಲ. ಬರೆಯುವಂತಿಲ್ಲ. ಹಾಗೆ ಮಾಡಿದ್ದು ತಿಳಿದ ತಕ್ಷಣ ಅವರನ್ನು ಗುಂಡಿಟ್ಟು ಕೊಲ್ಲಲಾಗುತ್ತದೆ.

❑ ಹೆಂಗಸರು ಫೋಟೋ ತೆಗೆಸಿಕೊಳ್ಳುವಂತಿಲ್ಲ. ಪಾಸ್‌ಪೋರ್ಟ್ ಮಾಡಿಸುವಂತಿಲ್ಲ. ಅಪರಿಚಿತ ವಿದೇಶಿ ಮಹಿಳೆಯೊಂದಿಗೆ ಮಾತನಾಡುವಂತಿಲ್ಲ. ಈ ನಿಯಮ ಮೀರಿದರೆ ಮರಣದಂಡನೆ ಖಂಡಿತ.

❑ ಮಹಿಳೆಯರು ಯಾವ ಕಾರಣಕ್ಕೂ ಪ್ರಶ್ನಿಸುವಂತಿಲ್ಲ. ಗಂಡನನ್ನು ಕೊಲ್ಲುತ್ತಿದ್ದರೆ ಯಾಕೆ ? ಎಂದು ಪ್ರಶ್ನಿಸಿದ ಮಹಿಳೆಯನ್ನು ತಕ್ಷಣ ಕೊಲ್ಲಲಾಗುತ್ತದೆ.

❑ ಸಾಯುವವರೆಗೆ ಮತ್ತು ಸತ್ತಮೇಲೂ ಮಹಿಳೆ ಬುರಖ ಧರಿಸಿರಬೇಕು. ಏಕೆಂದರೆ ಮೂರು ದಿನದವರೆಗೆ ಹೆಣ ಸಹ ಸುಂದರವಾಗಿ ಕಂಡು ಗಂಡನ್ನೂ ಅತ್ಯಾಚಾರಕ್ಕೆ ಪ್ರೇರೇಪಿಸಬಹುದು.

❑ ಹಿಂದಿನ ಆಫ್ಘಾನ್ ಸರ್ಕಾರ ನಿರ್ಮಿಸಿದ ಫುಟ್‌ಬಾಲ್ ಕ್ರೀಡಾಂಗಣವನ್ನು ಇಂದು ಧರ್ಮ ವಿರೋಧಿಗಳನ್ನು ಕೊಲ್ಲಲು ಬಳಸಲಾಗುತ್ತಿದೆ. ತಾಲಿಬಾನ್ ಸರ್ಕಾರದ ಮಂತ್ರಿಗಳ ಪ್ರಕಾರ ಧರ್ಮ ವಿರೋಧಿಗಳನ್ನು ಕೊಲ್ಲುವುದೂ ಸಹ ಮನರಂಜನೆಯೇ. ಅದು ಧರ್ಮ ರಕ್ಷಕರಿಗೆ ತುಂಬ ಖುಷಿಯನ್ನೂ ಪುಣ್ಯವನ್ನೂ ತರುತ್ತದೆಯೆಂತೆ.

❑ ಇಲ್ಲಿ ಧರ್ಮ ಪೋಲೀಸರು ಇದ್ದಾರೆ. ಅವರ ಕೆಲಸವೇನೆಂದರೆ ರಸ್ತೆ ರಸ್ತೆಗಳಲ್ಲಿ ಮನೆಮನೆಗಳಲ್ಲಿ ಧರ್ಮದ ಕಟ್ಟು ಪಾಡುಗಳನ್ನು ಮೀರುವವರನ್ನೂ ಹಿಡಿದು ತಕ್ಷಣ ಸರ್ಕಾರಕ್ಕೆ ಒಪ್ಪಿಸುವುದು.

❑ ತಪ್ಪು ಮಾಡಿದವರನ್ನು ಹಿಡಿದು ಜೈಲಿಗೆ ಕಳಿಸಲಾಗುವುದಿಲ್ಲ. ಬದಲಾಗಿ ಮಸೀದಿಗೆ ಕರೆ ತರಲಾಗುತ್ತದೆ. ಹೆಂಗಸರನ್ನು ಮಸೀದಿಯ ಹೊರಾಂಗಣದಲ್ಲಿ ದೂರದಲ್ಲಿ ನಿಲ್ಲಿಸಲಾಗುತ್ತದೆ.

❑ ತಪ್ಪು ಗಳನ್ನು ಪರಿಶೀಲಿಸುವುದು, ವಿಚಾರಣೆಗೆ ಒಳಪಡಿಸುವುದು ಯಾವುದೂ ಇಲ್ಲ. ಧರ್ಮ ರಕ್ಷಕ ಪೋಲಿಸರು ಹಿಡಿದರೆಂದರೆ ಅವರು ಶಿಕ್ಷಾರ್ಹ. ಈ ಧರ್ಮ ಗುರುಗಳು ಯಾವತ್ತು ಸಾಯಿಸುವುದು ಎಂದು ಮಾತ್ರ ತಿಳಿಸುತ್ತಾರೆ.

❑ ಅಲ್ಲಿ ಬಡತನ ಕಿತ್ತು ತಿನ್ನುತ್ತಿದೆ. 6 ವರ್ಷಗಳಿಂದ ಸತತವಾಗಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಅನೇಕ ಯುವಕರು ಮತ್ತು ಪ್ರೌಢರು ಸತ್ತಿದ್ದಾರೆ ಹಾಗೂ ಯುದ್ಧ ಖೈದಿಗಳಾಗಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ.

❑ ಅಲ್ಲಿ ದಿನೇ ದಿನೇ ವಿಧವೆಯರ ಮತ್ತು ಅನಾಥ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಹೆಣ್ಣು ಹೊರಗೆ ಹೋಗಿ ದುಡಿಯುವಂತಿಲ್ಲವಾದ್ದರಿಂದ ಭಿಕ್ಷಾಟನೆ ಒಂದು ದೊಡ್ಡ ಉದ್ಯೋಗವಾಗಿ ಪರಿಣಮಿಸಿದೆ ಕಂದಹಾರ್ ಮತ್ತು ಕಾಬೂಲ್‌ನ ಮುಖ್ಯ ಬೀದಿಗಳಲ್ಲಿ ಚಿಂದಿಯುಟ್ಟ ಮಕ್ಕಳು ಚಿಂದಿ ಬುರಖಾ ತೊಟ್ಟ ಮಹಿಳೆಯರು ಸಾಲು ಸಾಲಾಗಿ ಕುಳಿತು ಭಿಕ್ಷೆ ಬೇಡುತ್ತಿರುತ್ತಾರೆ.

❑ ದನಗಳಿಗೆ ಹಾಕುವ ಹಿಂಡಿಗಳನ್ನು ಮಹಿಳೆಯರು ಮಕ್ಕಳಿಗೆ ತಿನ್ನಿಸುತ್ತಾರೆ. ಅದು ಸಿಕ್ಕರೂ ಸುಗ್ರಾಸ ಭೋಜನ ಸಿಕ್ಕಂತೆ ಮಕ್ಕಳು ಖುಷಿ ಪಡುತ್ತಾರೆ.

❑ ಧರ್ಮ ವಿರೋಧಿಗಳನ್ನು ಗುಂಡಿಟ್ಟು ಕೊಂದಾಗ ಆ ಶವ ಸಂಸ್ಕಾರವನ್ನು ಕೇವಲ ಮನೆಯವರು ಮಾತ್ರ ಮಾಡ ಬೇಕಾಗುತ್ತದೆ. ತನ್ನ ಹನ್ನೊಂದು ಮಕ್ಕಳನ್ನು ಪೋಲೀಸರು ಕೊಂದು ಹಾಕಿದಾಗ ಆ ಬಡ ತಾಯಿ ತನ್ನ ಗುಡಿಸಿಲ ಸುತ್ತ ಏಕಾಂಗಿಯಾಗಿ ಗುಂಡಿ ತೋಡಿ ಹೂಳಬೇಕಾಯಿತು.

❑ ಅಲ್ಲಿ ವಿದೇಶೀಯರಿಗೆ ಪ್ರವೇಶವಿಲ್ಲ. ವಿಡಿಯೋ ತೆಗೆಯುವಂತಿಲ್ಲ. ತಾಲಿಬಾನ್ ಸರ್ಕಾರ ಟಿ.ವಿಯನ್ನು ನಿಷೇಧಿಸಿದೆ. ರೇಡಿಯೋ ಸಹ ಮನೆಗಳಲ್ಲಿ ಇಡಲು ಪರವಾನಿಗೆ ಇಲ್ಲ.

❑ ಒಂದು ಕಾಲದಲ್ಲಿ ಅತ್ಯಂತ ಸುಂದರವಾಗಿದ್ದ, ಪ್ರಾಚೀನ ಇತಿಹಾಸವನ್ನು ಹೊಂದಿರುವ ಕಾಬೂಲ್ ಇಂದು ಸ್ಮಶಾನ ಸದೃಶವಾಗಿದೆ. ಬೀದಿಬೀದಿಗಳಲ್ಲಿ ಗುಂಡಿನ ಶಬ್ದ ಕೇಳಿ ಬರುತ್ತದೆ. ಹಸಿರು ಮಾಯವಾಗಿದೆ. ಟಾರ್ ಸಹ ಇಲ್ಲದ ರಸ್ತೆಗಳಲ್ಲಿ ಧೂಳು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಮೆರೆಯುತ್ತಿದೆ.

❑ ಈ ಎಲ್ಲ ನಿಷೇಧಗಳ ನಡುವೆ ಕದ್ದು ಮುಚ್ಚಿ ವಿಡಿಯೋ ಚಿತ್ರೀಕರಣ ನಡೆಸಿ ಸಿ.ಎನ್.ಎನ್. ಸಂಸ್ಥೆಗೆ ಒಪ್ಪಿಸಿದವರು ಕಾಬೂಲ್‌ನಲ್ಲೇ ಹುಟ್ಟಿದ ಆದರೆ ಅಮೇರಿಕಾದಲ್ಲಿ ನೆಲೆಸಿರುವ ಪತ್ರಕರ್ತೆ ನೂರ್ ಎನ್ನುವವರು.

ರಸ್ತೆಯಂಚಿನ ಮುದುಕಿ

ಈಗೊಂದು ಕ್ಷಣದ ಹಿಂದೆ
ಈ ರಸ್ತೆ ನಿರುಂಬಳವಾಗಿತ್ತು
ಕಪ್ಪಾಗಿ, ನೀರ ಪಸೆ ಆರದಂತೆ
ಮಿರುಮಿರನೆ ಮಿರುಗಿತ್ತು
ಈಗೊಂದು ಘಳಿಗೆಯ ಹಿಂದೆ
ಈ ಮರಗಳಲ್ಲಿ ಹಚ್ಚ ಹಸುರಿತ್ತು
ಗಿಳಿಮರಿಗಳ ಉಸಿರಿತ್ತು
ಕೆಂಪುಹೂ ನಳನಳಿಸಿತ್ತು
ಈಗ್ಗೆ ಕೆಲನಿಮಿಷದ ಹಿಂದೆ
ನೇಸರು ಉದಯಿಸುತ್ತಿತ್ತು
ಬಂಗಾರ ಬಿಸಿಲಾಗಿ ಚೆಲ್ಲಿತ್ತು
ಉಸಿರು ಉಸಿರುಗಳಲ್ಲಿ
ಬಿಸಿಯ ತುಂಬುತಲಿತ್ತು
ಕೆಲವೇ ಕಾಲದ ಹಿಂದೆ
ಸಾಗರ ಶಾಂತವಾಗಿತ್ತು
ಹುಚ್ಚುತನ ಮರೆತ ಅಲೆಗಳು
ತೆಪ್ಪಗೆ ಬಿದ್ದುಕೊಂಡಿತ್ತು
ಈಗೆಲ್ಲ ತಲೆಕೆಳಗು
'ಭಯವೆಂದರೇನೆ ಗೆಳತಿ'
ಅಜ್ಜಿಯೊಳಗಿನ ಹರೆಯ
ಚೆಲ್ಲುತ್ತದೆ ಪ್ರಶ್ನೆಯ
ಮುಚ್ಚಿ ಮುಸಿ ನಗೆಯ !
ಬೆಚ್ಚುತ್ತಾಳೆ ಮುದುಕಿ
ಹುಡುಕುತ್ತಾಳೆ ಮರುನುಡಿಯ
ಗಂಡನ ಉರಿಗಣ್ಣೊ
ಅತ್ತೆಯ ಬಿರು ನಾಲಿಗೆಯೋ
ಯಾವುದು ಭಯದ ಮೂಲ ?

ನಿಟ್ಟುಸಿರು ಚೆಲ್ಲುತ್ತವೆ
ಕಂತೆ ಕಂತೆ ಕತೆಗಳನು
ಕಣ್ಣಕೆಳಗಿನ ನೆರಿಗೆ
ವಾಸ್ತವಕೆ ಎಳೆಯುತ್ತದೆ
ಹಾಡುಹಗಲೇ ಹೆಣ್ಣಿನ.
ಸೀರೆ ಸೆಳೆದಿದ್ದಾರೆ
ದಾರಿಯಲ್ಲೇ ? ?
ಲಂಗೋಟಿ ತೊಟ್ಟು
ನಲಿಯುತ್ತಿವೆಯೇ
ಹದಿಹರೆಯದ
ಹೆಣ್ಣುಗಳು !!
ಭಯದ ಮೂಲಗಳೆಲ್ಲ
ಬುಡಮೇಲಾಗಿ ಅಜ್ಜಮ್ಮ
ಬಡಬಡಿಸುತ್ತಾಳೆ
'ಹಿಂದೊಂದು ಬದುಕಿತ್ತು
ಬದುಕಿಗಾಸರೆಯಾಗಿ
ಭಯವಿತ್ತು'
ಎಲ್ಲೋ ಸಾಹಿತಿಗೆ ಸನ್ಮಾನ
ಯಾವುದೋ ಕೃತಿಗೆ
ಬಹುಮಾನ ! ಮತ್ತೆಂಥದೋ
ಜಾತ್ರೆ, ಗಡಚಿಕ್ಕುವ ಚಪ್ಪಾಳೆ
ಸದ್ದು ! ಅಜ್ಜಿಯ
ಕಣ್ಣೊಳಗಿನ ಬಯಲೊಳಗೆ
ನರಸತ್ತ ಜೀವಗಳು
ಆಸರೆಯ ಕೈಗೋಲು
ತಪ್ಪವಾಗಿದೆಮಲಗಿ
ಕಡೆಗೂ ಅಜ್ಜಿಗೆ
ಆ ರಸ್ತೆ ದಾಟಲಾಗಲೆ ಇಲ್ಲ

– ಶಾಂತನಾಗರಾಜ್

★

ಕಥೆ

ಬಂದಾನೋ ಬಂದಾ ಸವಾರ

ಆ ಗುಡಿಸಿಲಿನ ಮುಂದೆ ನರ್ತಕಿ ನರ್ತಿಸುತ್ತಿದ್ದಳು : ''ಥಾಥೈ ಥಕ್ಕಥೈ''......... ಅವಳೇ ಮನಸ್ಸಿಗೆ ಬಂದ ಹಾಗೆ ನಾದರೂಪವನ್ನು ಕೊಟ್ಟುಕೊಳ್ಳುತ್ತಿದ್ದಳು. ಹಿಂದಿನ ಸಂಜೆ ಅಮ್ಮಾವ್ರ ಮನೆಯ ಟಿ. ವಿ.ಯಲ್ಲಿ ನೋಡಿದ ನರ್ತಕಿ ಹಾಗೂ ಅವಳ ನೃತ್ಯಗಳ ಹಾವಭಾವವೇ ಅವಳ ಕಣ್ಣ ತುಂಬ ತುಂಬಿಕೊಂಡು ಮನಸ್ಸಿನ ಒಳಗೂ ಇಳಿದು ನರನರಗಳಲ್ಲಿ ವ್ಯಾಪಿಸಿ ಕ್ರಮೇಣ ಅವಳು ತನ್ನನ್ನೇ ತಾನು ಮರೆತು ತಾನೇ ಆ ನರ್ತಕಿಯಂತೆ ಕಾಣಿಸುತ್ತಿದ್ದೇನೆ ಎನ್ನುವ ಭ್ರಮೆಗೆ ಒಳಗಾದಳು. ತನ್ನ ಕಪ್ಪುಕಟ್ಟಿಗೆಯಂಥ ಕೈಗಳು ಸುಂದರ ಬಿಳಿಯ ಕೈಗಳಾದವು. ಕರಿದಾಗಿ ಒಳಹೋಗಿದ್ದ ಕೆನ್ನೆಗಳು ಗುಲಾಬಿ ದುಂಡು ಕೆನ್ನೆಗಳೆನಿಸಿದವು. ಉಬ್ಬು ಹಲ್ಲು ಒಳ ಹೋಗಿ ಸುಂದರ ದಾಳಿಂಬೆ ದಂತ ಪಂಕ್ತಿಗಳಾದವು. ತುಟಿಯಂತೂ ಕೆಂಪಗೆ ರಕ್ತ ತೊಟ್ಟಿಕ್ಕುತಿರುವುದರ ಹಾಗೆನಿಸಿ ನಾಲಿಗೆಯಿಂದ ಸವರಿಕೊಳ್ಳುತ್ತಾ ನಗುವ ಭಾವವನ್ನು ಮುಖದ ತುಂಬಾ ತುಂಬಿಕೊಂಡಳು. ತಾನು ತೊಟ್ಟ ಅಮ್ಮಾವ್ರ ಮೊಮ್ಮಗಳ ಹರಿದ ಚೂಡಿದಾರ್ ನವಿರಾದ ರೇಷಮೆ ಸೀರೆಯಿಂದ ಹೊಲಿದ ಡ್ಯಾನ್ಸ್ ಡ್ರೆಸ್‌ನಂತೆ ಕಂಡು ಅದನ್ನೇ ಬಳುಕಿಸುತ್ತಾ ಕುಣಿಯತೊಡಗಿದಳು.

''ಸುಡ್‌ಗಾಡ್ ಗಂಗೀ, ಅದೇನು ಎಗರಲಾಡ್ತಿದ್ದೀ ಅಲ್ಲಿ ಬಾ ಪಾತ್ರೆತೊಳೆದ್ ಇಟ್ಟೇವ್ನಿ ಎಲ್ಲಾ ಒಳಗ್ ಮಡಗು'' ಅಜ್ಜಿಯ ಘರ್ಜನೆಯಿಂದ ದಿಢೀರನೆ ಪಾತಾಳಕ್ಕೆ ಅಪ್ಪಳಿಸಿದಂತಾದಳು ಗಂಗಿ. ಒಂದು ಕ್ಷಣ ಅಜ್ಜಿಯನ್ನೇ ಕುಕ್ಕಿ ಕೊಲ್ಲುವಷ್ಟು ಕೋಪ ಬಂತು. ಮರುಕ್ಷಣವೇ ತನ್ನ ಎಂಥಾ ಅಮೋಘ ಡ್ಯಾನ್ಸ್‌ನ್ನು ಅಜ್ಜಿ ಎಗರ್‌ಲಾಡ್ತೀ' ಎಂದು ಅವಮಾನಿಸಿದಳು, ಎನಿಸಿ ತುಂಬಾ ಬೇಸರವೆನಿಸಿತು. ಆದರೂ ಅವಳ ಒಳಗಣ್ಣುಗಳಿಂದ ಟಿ. ವಿ. ನರ್ತಕಿ ಮರೆಯಲಾಗಿರಲಿಲ್ಲ. ಅವಳು ನಡೆದಂತೇ ತಾನೂ ನಡೆದು ಮೂಲೆಯ ಭಾವಿಯ ಬಳಿಯಿದ್ದ ಅಜ್ಜಿಯ ಹತ್ತಿರ ಹೋಗಿ ನರ್ತಕಿಯರು ಪ್ರಾರಂಭದಲ್ಲಿ ಮಾಡುವ ರಂಗನಮನದಂತೆ ಎರಡೂ ಕೈಗಳನ್ನು ತಲೆಯ ಮೇಲೆ ತಂದು ನೀಟಾಗಿ ಕೆಳಗೆ ಬಗ್ಗಿ ನೆಲ ಮುಟ್ಟಿ ಕಣ್ಣಿಗೆ ಒತ್ತಿಕೊಂಡು ಸ್ಟೈಲಾಗಿ ಒಂದೇ ಸೊಂಟದ ಮೇಲೆ ಎರಡು ಕೈಗಳನ್ನಿಟ್ಟುಕೊಂಡು 'ಏನಜ್ಜೀ' ಎಂದಳು ರಾಗವಾಗಿ. ತಾಯಮ್ಮನಿಗೆ ನಖಶಿಖಾಂತ ಉರಿದು ಹೋಯಿತು. ಗಂಗಿಯ ಪುಣ್ಯಕ್ಕೆ ಅವಳು ಸೇದುತ್ತಿದ್ದ ನೀರಿನ ಕೊಡ ಭಾವಿಯಲ್ಲಿತ್ತು. ಇನ್ನೂ ತುಂಬಿರಲಿಲ್ಲ. ಅದು ಖಾಲಿಯಾಗೋ, ತುಂಬಿಯೋ ಭಾವಿಯಿಂದ ಮೇಲೆದ್ದಿದ್ದರೆ ಆ ಕೊಡದಿಂದಲೇ ಗಂಗಿಯ ತಲೆಗೊಂದು ತಟ್ಟುತ್ತಿದ್ದಳು. ಕೈಯಲ್ಲಿ ಹಿಡಿದ ಹಗ್ಗವನ್ನು ಮೇಲೆ ಕೆಳಗೆ ಆಡಿಸುತ್ತಾ ಒಳಗಿನ ಕೊಡ ನೀರು ತುಂಬಿಕೊಳ್ಳಲು ಯತ್ನಿಸುತ್ತಿದ್ದವಳು ಕಣ್ಣಿನಿಂದಲೇ ಸುಟ್ಟು ಬಿಡುವ ಹಾಗೆ ಗಂಗಿಯನ್ನು ನೋಡುತ್ತ ''ಆ ದರಿದ್ರ ರಂಡೆ ಮನೆಗ್ಹೋಗಿ ನೋಡ್ಕಂಡ್ ಬಾ ನಿಮ್ಮಪ್ಪ ಬಂದವನಾಂತ'' ಎಂದಳು. ಗಂಗಿ ಅಜ್ಜಿಯ ಉರಿಗಣ್ಣಿಗೆ ಏನೇನೂ ಹೆದರಿರಲಿಲ್ಲ. ಅದೇ ಭಂಗಿಯಲ್ಲೇ ನಿಂತಿದ್ದಾಳೆ. ಮತ್ತೆ ಸೊಂಟದಿಂದ ಮೇಲ್ಭಾಗವನ್ನು ಅರ್ಧಚಂದ್ರಾಕಾರದಲ್ಲಿ ತಿರುಗಿಸುತ್ತಾ ಕೇಳಿದಳು : 'ದರಿದ್ರ ರಂಡೆ ಅಂದ್ರೆ ಯಾರಜ್ಜೀ''

ಆ ಹೊತ್ತಿಗೆ ಕೊಡವನ್ನು ರಾಟೆಯ ಹತ್ತಿರಕ್ಕೆ ಎಳೆದಿದ್ದಳು ತಾಯಮ್ಮ : '' ಯಾರಾ ಏಳ್ತೀನಿ ತಾಳು ಕಳ್ಳ ಲೌಡಿ' ಎಂದು ಕೊಡವನ್ನು ಭಾವಿಕಟ್ಟೆಯ ಕಡೆ ಎಳೆಯಲು ಗಂಗಿಯ ಕಡೆ ಬೆನ್ನು ಮಾಡಿ ಆ ಕಡೆ ತಿರುಗಿದಳು. ಕೊಡದೊಂದಿಗೆ ಮತ್ತೆ ಇತ್ತ ತಿರುಗಿದಾಗ ಗಂಗಿ ಪರಾರಿಯಾಗಿದ್ದಳು. ಅಲ್ಲೇ ನಿಂತಿದ್ದರೆ ಗಂಗಿಗೆ ಸಚೇಲ ಸ್ನಾನವಾಗುತ್ತಿತ್ತು. ಎಳೆದ ಕೊಡದ ನೀರನ್ನು ದಭದಭನೆ ಅವಳ ತಲೆ ಮೇಲೆ ಸುರಿಯುವವಳಿದ್ದಳು, ತಾಯಮ್ಮ. ಆ ಕ್ಷಣಕ್ಕೆ ಗಂಗಿಗಾದ ಅರಿವು ಎಷ್ಟು ಚುರುಕಾಗಿತ್ತೆಂದರೆ ಅವಳ ಮೈಯಲ್ಲಿ ಏರಿದ ನರ್ತಕಿಯ ಭ್ರಮೆ ಝುರ್ರನೆ ಇಳಿದು ಹೋಗಿ ಅವಳನ್ನು ಅಲ್ಲಿಂದ ಪಲಾಯನ ಮಾಡುವಂತೆ ಮಾಡಿತ್ತು. ತಾಯಮ್ಮ ಮನಸ್ವೀ ಬಯ್ದಳು. ತನಗೆ ಗೊತ್ತಿದ್ದ ಎಲ್ಲ ಬಯ್ಗಳನ್ನು ಯಾರಿಗೋ ಒಪ್ಪಿಸುವ ಮಾದರಿಯಲ್ಲಿ ಮಂತ್ರದಂತೆ ಒಂದನ್ನೂ ಒಳಗೆ ಉಳಿಸಿ ಕೊಳ್ಳದೆ ಬಯ್ದಳು. ಸೊಂಟದಲ್ಲಿ ಕೊಡ ಏರಿಸಿ ತಲೆಯ ಮೇಲೆ ತೊಳೆದ ಪಾತ್ರೆಗಳಿದ್ದ ಬುಟ್ಟಿ ಏರಿಸಿ ಅಡಿಗೆ ಮನೆ ತಲುಪುವವರೆಗೂ ಬಯ್ಯುತ್ತಲೇ ಇದ್ದಳು. ಎಪ್ಪತ್ತೈದು ವರ್ಷಗಳ ತಾಯಮ್ಮ.

ತಾಯಮ್ಮನ ಮನೆ ಗುಡಿಸಲಾದರೂ ವಿಶಾಲವಾಗಿಯೇ ಇತ್ತು. ತನ್ನ ಗಂಡನ ಜೊತೆಯಲ್ಲೇ ಪರಲೋಕ ಸೇರಿದ, ದಿನಕ್ಕೊಮ್ಮೆಯಾದರೂ ಇವಳ ಬಾಯಿಂದ ಭಯಭಕ್ತಿಗಳಿಂದ ಪುಣ್ಯಾತ್ಮ ಎಂದು ಕರೆಸಿಕೊಳ್ಳುವ ದೊಡ್ಡ ಎಜಮಾನರು ಕಟ್ಟಿಸಿಕೊಟ್ಟಿದ್ದ ಮನೆ ಅದು. ಅವಳ ಗಂಡ ಆ ಬಟ್ಟೆ ಮಿಲ್ಲಿನ ವಾಚ್‌ಮನ್ ಆಗಿ ದುಡಿಯುತ್ತಿದ್ದಾಗ ! ಅವಳಿಗೆ ಹುಟ್ಟಿದ ಮಕ್ಕಳೆಲ್ಲಾ, ಯಾವಯಾವುದೋ ರೋಗಗಳಿಂದ ಹೊಟ್ಟೆಯೊಳಗಿನಿಂದ ಹೊರಬಂದು ಮಡಿಲಿಗೆ ಸೇರುವ ಮುನ್ನವೇ ಶಿವಪಾದ ಸೇರಿ ತೃಪ್ತಿಪಟ್ಟುಕೊಳ್ಳುತ್ತಿದ್ದಾಗ ಯಾವ, ಯಾವುದೋ ದೇವರು, ಹರಕೆ ಅಂತೆಲ್ಲಾ ಮಾಡಿ ಉಳಿದುಕೊಂಡರು. ಈ ಮಗ ಉದ್ದಂಡವಾಗಿ ಬದುಕಿದವರಿಗಿಂತ ಸತ್ತಮಕ್ಕಳೇ ಮೇಲು ಅಂದುಕೊಳ್ಳುವ ಹಾಗೆ ಮಾಡಿ, ಗೋರಿಗೆ ಹೋಗಲು ತಯಾರಾದ ದಿನಗಳಲ್ಲಿ ಅವಳ ಕುತ್ತಿಗೆಗೆ ಎಂಟು ಜನರ ಖರ್ಚುಗಳನ್ನು ಕಟ್ಟಿದ್ದ ಮಹಾನುಭಾವ !

ಬಯ್ಗಳದ ಸ್ವಾಕೆಲ್ಲಾ ಮುಗಿದ ಮೇಲೆ ಮನೆಯಿಂದ ಹೊರಬಂದು ಜಗುಲಿಯಮೇಲೆ ಕೂಡೋಣವೆಂದು ನೋಡಿದರೆ ಜಗುಲಿಯ ಮೂಲೆಯಲ್ಲಿ ಉದ್ದನೆಯ ತೊಟ್ಟಿರುವ

ಬಿಳಿಯ ಘಮಘಮಿಸುವ ಹೂವುಗಳನ್ನು ತುಂಬಾ ಆರಿಸಿ ತಂದು ದಾರವೇ ಇಲ್ಲದೆ ತೊಟ್ಟನ್ನೇ ಜಡೆಯ ಹಾಗೆ ಹೆಣೆಯುತ್ತಾ ಮಾಲೆ ಮಾಡುತ್ತಿದ್ದ ಹುಚ್ಚಿ ಸೊಸೆ ತಾರಕ ಸ್ವರದಲ್ಲಿ ಎಂದಿನಂತೆ ಆವಳು ಯಾವತ್ತೋ ನೋಡಿದ ನಾಟಕದ ಹಾಡನ್ನು ಹಾಡುತ್ತಿದ್ದಳು ''ಬಂದಾನೋ ಬಂದಾ ಸವಾರಾ ಯಾವ ಊರಿನ ಸರದಾರ'' ದಿನ ನಿತ್ಯದಲ್ಲಿ ಈ ಹಾಡು ಕೇಳಿ ಕೇಳಿ ಬೇಸತ್ತಿದ್ದರೂ ಒಮ್ಮೊಮ್ಮೆ ಆವಳಿಗನ್ನಿಸುತ್ತಿತ್ತು 'ಹುಚ್ಚಿಯಾದ್ರೂ ಈ ರಂಡೆ ಸರ ಚೆನ್ನಾಗೈತೆ'' ಎಂದು. ಆದರೆ ಈ ದಿನ ಅವಳ ಮನಸ್ಸೇ ಸಾಕಷ್ಟು ವ್ಯಗ್ರವಾಗಿತ್ತು. ''ಮುಚ್ಚೆ ಬಾಯ್ನ ಯಾರ ಹೆಣಕ್ಕೆ ಹಾಕ್ಲಿಕ್ಕೆ ಕಟೀ್ತ ಹೂವನ್ನು'' ಸಾಕಷ್ಟು ಕರ್ಕಶವಾಗಿಯೇ ಕಿರುಚಿದಳು ತಾಯಮ್ಮ. ಹುಚ್ಚಮ್ಮನು ಮಾತ್ರ ಇವಳ ಬಯ್ಗುಳವನ್ನು ಒಂದು ಸೂಜಿ ಮೊನೆಯಾದ್ರೂ ಸ್ವೀಕರಿಸಿರಲಿಲ್ಲ, ಸುಮ್ಮನೆ ಒಮ್ಮೆ ಹಲ್ಲು ಕಿರಿದು ತನ್ನ ಹಾಡನ್ನು ತನ್ನತ್ತೆ ಮೆಚ್ಚಿದಳೇ ಎನ್ನುವಂತೆ, ಅದಕ್ಕೆ ತಾನು ವಂದನೆ ಹೇಳುವ ಹಾಗೆ ತಲೆ ಅಲುಗಿಸಿ ಮತ್ತೆ ರಾಗ ಪ್ರಾರಂಭಿಸಿದಳು. ''ರತ್ನದ ಕುಚ್ಚಿನ ಪಾವುಡೆ, ಕೊರಳಿಗೆ ಮಲ್ಲಿಗೆ ಹಾರಾ'' ಕೈಯಲ್ಲಿ ಹೆಣೆಯುತ್ತಿದ್ದ ಹೂವಿನ ಮಾಲೆಯನ್ನು ಬೇರೆ ತಡರಿಸುತ್ತಾ ಅಭಿನಯದೊಂದಿಗೇ ಹಾಡುತ್ತಿದ್ದವಳನ್ನು ಕಂಡು ಏನು ಮಾಡಬೇಕೆಂಬುದೇ ತಿಳಿಯದ ತಾಯಮ್ಮ ಚಡಪಡಿಸುತ್ತಿದ್ದಾಗ ಗಂಗಿಯ ಆಗಮನವಾಯಿತು ಏದುಸಿರಿನೊಂದಿಗೆ.

''ಅಜ್ಜೀ ಮಂತೇ.........ಎನ್ನುವ ರಾಗದೊಂದಿಗೆ ಹನ್ನೆರಡು ವರ್ಷದ ಗಂಗಿಯು ಅಜ್ಜಿ ಹೇಳುವ ಕೆಲಸಗಳಿಗೆಲ್ಲ ಒಪ್ಪಿಸುವ ಪಾಠದ ಮಾದರಿಯ ರಾಗದಲ್ಲೇ ಶುರುಮಾಡಿದಳು. ''ಆ ರಂಡೆ ಮನೆ ಪಕ್ಕದ ಮನೆಯೋರು ಏಳಿದ್ರೂ, ಆ ರಂಡೆನೂ ಆಯನ್ನಾನೂ ಬೊಂಬೈಗೆ ಓಗವ್ರಂತೆ ಆದನ್ನೈದ್ ದಿನವಾಯ್ತು, ಯಾವತ್ ಬತ್ತಾರೋ ಗೊತ್ತಿಲ್ವಂತೇ......''

ತಾಯಮ್ಮನೂ, ಗಂಗಿಯು ಉಪನಾಮವನ್ನು ಕೊಟ್ಟು ಕರೆಯುತ್ತಿದ್ದ ಆ ಹೆಂಗಸು ಕರೆದು ತಂದವಳು. ತಾಯಮ್ಮನ ಮಗ ಕಚ್ಚೆಹರುಕ ಎನ್ನುವುದು ಆ ಊರಿಗೇ ತಿಳಿದ ವಿಷಯ. ತಾಯಮ್ಮ ಲಕ್ಷಣವಾಗಿ ತನ್ನಣ್ಣನ ಮಗಳನ್ನೇ ಸೊಸೆಯಾಗಿ ತಂದುಕೊಂಡು ಮನೆ ತುಂಬಿಸಿಕೊಂಡಿದ್ದಳು. ಅವಳು ಕಪ್ಪಗಿದ್ದಾಳೆ, ಚೆನ್ನಾಗಿಲ್ಲ ಎನ್ನುವ ಕೊಸರಾಟದೊಂದಿಗೆ ಅಮ್ಮ-ಮಗನ ವ್ಯಾಜ್ಯ ಪ್ರಾರಂಭವಾದದ್ದು ಅವಳಿಗಿನ್ನು ಒಂದೂ ಮಕ್ಕಳಾಗಿರಲಿಲ್ಲ. ತನಗೆ ಹೇಳದೆ ಕೇಳದೇ ಈ ಹುಚ್ಚಮ್ಮನನ್ನು ಮದುವೆಯಾಗಿ ಮನೆಗೆ ತಂದ. ಆಗ ಇವಳಿಗೆ ಹುಚ್ಚಿರಲಿಲ್ಲ, ಚೆನ್ನಾಗಿಯೇ ಇದ್ದಳು. ಪಾಪ ಮೊದಲ ಹೆಂಡತಿ ತುಂಬಾ ಒಳ್ಳೆಯವಳೇ. ಸವತಿಯನ್ನು ದುಃಖ ನುಂಗಿ ಸಹಿಸಿಕೊಂಡಳು. ಇವಳಿಗೊಬ್ಬ ಮಗನೂ ಹುಟ್ಟಿದಾಗ ಇವಳ - ಅವನ ಮೆರೆತವೇನು ? ಗಂಡ ಹೆಂಡತಿಯರು ತನ್ನಣ್ಣನ ಮಗಳನ್ನು ಮೂದಲಿಸಿದ್ದೆಷ್ಟು ! ತಾನು ಆಗ ಮೂಕಸಾಕ್ಷಿಯಷ್ಟೇ ಆಗಿದ್ದೇಕೆ ? ಮನೆಗೆ ಗಂಡುಮಗನನ್ನು ಕೊಟ್ಟ ಈ ಜಾತಿಯಲ್ಲದ ಜಾತಿಯ ಹೆಣ್ಣನ್ನು ಮೊಮ್ಮಗನನ್ನು ತೊಡೆಯಲ್ಲಿಟ್ಟ ಒಂದೇ ಕಾರಣಕ್ಕೆ ಕ್ಷಮಿಸಿದ್ದಲ್ಲವೇ ? ನಂತರದ ದಿನಗಳಲ್ಲಿ ದೊಡ್ಡವಳೂ ಒಂದಲ್ಲ ಎರಡು ಸಾಲಾಗಿ ಐದು ಹೆಣ್ಣು ಮಕ್ಕಳಿಂದ ಈ ದೊಡ್ಡ ಗುಡಿಸಲೂ ಕಿರಿದಾಗುವ ಹಾಗೆ ಮಾಡಿದಳು. ಸವತಿಯರೇನೋ ಹೊಂದಿಕೊಂಡರು. ಮಗರಾಯನಿಗೆ ಮತ್ತೆ ಹೊರಗಿನ ಮೋಹ ಮೂರನೆಯವನ್ನು ಕಟ್ಟಿಕೊಂಡ. ಅವಳು ದೊರೆಸಾನಿಯ ಹಾಗೆ ನಿನ್ನ ಗುಬ್ಬಚ್ಚಿ ಗೂಡಿಗೆ ನಾನು ಬರುವುದಿಲ್ಲ. ನೀನೇ ನನ್ನ ಮನೆಗೆ ಬಾ' ಎಂದು ಮಗನನ್ನೇ ಎಗರಿಸಿಬಿಟ್ಟಳು. ದೊಡ್ಡವಳು ಕೊನೆಯ ಮಗುವಿನ ಬಾಣಂತನದಲ್ಲಿ ಏಕೋ ಮಂಕಾಗಿದ್ದವಳು ಕಾಯಿಲೆ ಏನೆಂದು ತಾನು ತಿಳಿಯುವ ಮೊದಲೇ ಸವೆದು ಸವೆದು ಸತ್ತೇಹೋದಳು. ಗಂಡುಮಗನ ತಾಯಿ ಎಂದು ಬೀಗುತ್ತಿದ್ದ ಈ ರಾಣಿ, ಗಂಡ ಮೂರನೆಯವಳನ್ನು ಕಟ್ಟಿಕೊಂಡನೆಂದು ಅವನು ಆಗೊಮ್ಮೆ ಈಗೊಮ್ಮೆ ಮನೆಗೆ ಬಂದಾಗ ಜಗಳವಾಡಿ ಆಡಿ ಕೊನೆಗೆ ಅದನ್ನೇ ಕೊರಗನ್ನಾಗಿಸಿಕೊಂಡು ಹುಚ್ಚು ಹಿಡಿಸಿಕೊಂಡು ಕೂತಳು.

ಮಗನೋ ಒಮ್ಮೆ ಮನೆಯಿಂದ ಕಾಲ್ತೆಗೆದವನು ಮತ್ತೆ ಮನೆ, ಜವಾಬ್ದಾರಿ ಎನ್ನುವುದರ ಉಸಿರೇ ಇಲ್ಲ ! ಎಂಟು ಹೊಟ್ಟೆಯನ್ನು ಹೇಗೆ ನಿಭಾಯಿಸುತ್ತೀ ಎಂದೇನಾದರೂ ತನ್ನನ್ನು ಒಮ್ಮೆ ಕೇಳಿದ್ದಾನೆಯೇ ! ಮೂರನೆಯವಳು ಓಡಿ ಹೋದಳಂತೆ ಯಾರನ್ನೋ ಕಟ್ಟಿಕೊಂಡು ! ಆಮೇಲಾದರೂ ಮನೆಗೆ ಬಂದನೇ ಹೂವಿನಿಂದ ಹೂವಿಗೆ ಹಾರುವ ಚಿಟ್ಟೆಯ ಹಾಗೆ ಹೆಣ್ಣುಗಳ ಬೆನ್ನು ಹತ್ತಿದ್ದಾನೆ ಈ ಆಧುನಿಕ ಕೃಷ್ಣ ಪರಮಾತ್ಮ ! ಏನೋ ಬಿಸಿನೆಸ್ ಮಾಡುತ್ತಾನಂತೆ, ಯಾರಿಗೆ ಗೊತ್ತು ಅವನು ದುಡಿದ ದುಡ್ಡಿನ ಧೂಳನ್ನು ಕಾಣಲಿಲ್ಲ ತಾನು.

''ಮೊಮ್ಮಗನೇನೋ ಜತನದಿಂದ ಓದಿದರೆ, ಹತ್ತನೇ ಕ್ಲಾಸು ಪಾಸು ಮಾಡಿದರೆ ಒಳ್ಳೆ ಕೆಲಸ ಕೊಡಿಸುತ್ತೇನೆ ಎಂದಿದ್ದಾರೆ ಅಮ್ಮಾವ್ರು. ಈವತ್ತು ಅದೇ ಪಾಸೋ ಫೇಲೋ ತಿಳೀತೈತಿ '' ತಾಯಮ್ಮ ಚಡಪಡಿಸ ಹತ್ತಿದಳು. ಬೆಳಗ್ಗೆಯಿಂದ ಮೊಮ್ಮಗನೂ ಪತ್ತೆ ಇಲ್ಲ. ಈ ಅಪ್ಪನೆನಿಸಿಕೊಂಡವನಂತೂ ಇಲ್ಲವೇ ಇಲ್ಲ. ಪರೀಕ್ಷೆ ಆದಮೇಲೆ ರಿಸಲ್ಟ್ ಬರುವವರೆಗೆ ಪಕ್ಕದೂರಿನ ಟೀ ಏಜೆಂಟರ ಮನೆ ಹಾಗೂ ಸೊಸೈಟಿ ನೋಡಿಕೊಳ್ಳಲು ತಾಯಮ್ಮನ ಗಾರ್ಡಿಯನ್ ಆಗಿದ್ದ ಅಮ್ಮನವರೇ ಏರ್ಪಾಡು ಮಾಡಿದ್ದರು. ರಿಸಲ್ಟ್ ಬಂದ ತಕ್ಷಣದಿಂದಲೇ ಇಲ್ಲೇ ಒಂದು ಕೆಲಸವೂ ಏರ್ಪಾಟಾಗಿತ್ತು. ಎಪ್ಪತ್ತಾರರ ಮುದುಕಿಗೆ ತನ್ನ ಹೆಗಲಿನಿಂದ ಎಂಟು ಹೊಟ್ಟೆಗಳ ನೊಗ ಇಳಿಸುವ ಸಂಭ್ರಮ ಹರಡಿತ್ತು. ನಿನ್ನೆ ಬಂದವ ''ನಾಳೆ ರಿಸಲ್ಟ್ ಬರ್ತೈತೆ. ನಾನೂ ಬೆಳಗ್ಗೇನೆ ಬಂದು ಬಿಡ್ತೀನಿ' ಎಂದವ ಸೂರ್ಯ ಮೇಲೇರುತ್ತಿದ್ದರೂ ಪತ್ತೆಯಿಲ್ಲ. ಕುಳಿತ ಕಡೆ ಕೂಡಲಾರದೇ ನಿಂತೆಡೆ ನಿಲ್ಲಲಾರದೇ ಚಡಪಡಿಸಿದಳು ತಾಯಮ್ಮ. ''ಅಜ್ಜಿ ಅಸಿವೂ'' ಗಂಗಿಯ ತಂಗಿಯರು ಘೇರಾವೋ ಮಾಡಿದರು. ಅವರನ್ನೆಲ್ಲಾ ಒಟ್ಟಿಗೆ ಬಾವಿಯಲ್ಲಿ ತಳ್ಳಿಬಿಡುವಷ್ಟು ಕೋಪ ಬಂದರೂ, ತನ್ನ ಎಂದಿನ

ವಟವಟವನ್ನು ಬದಿಗಿರಿಸಿ ಯಾಂತ್ರಿಕವಾಗಿ ರಾಗಿ ಅಂಬಲಿಯನ್ನು ಬೇಯಿಸಿ, ಮಕ್ಕಳ ಬಾಯಿ ಮುಚ್ಚಿಸಿದ್ದಾಯಿತು. ಹುಚ್ಚಮ್ಮನೂ ತನ್ನ ಹೂವಿನ ಕೈಂಕರ್ಯ ಬದಿಗಿರಿಸಿ ಗಂಜಿಗಾಗಿ ಘೇರಾಯಿಸಿದಳು. ಗಂಗಿ ಕೊನೆಯ ಗಿರಾಕಿಯಾಗಿ ಗಂಜಿ ಕುಡಿದು ಅಜ್ಜಿಗೊಂದಿಷ್ಟು ಇರಿಸಿ ಮಕ್ಕಳು ತಿಂದು ಚೆಲ್ಲಾಡಿದ್ದ ಗಂಗಾಳಗಳನ್ನು ತೊಳೆದಿರಿಸಿ ಹೊರಕಟ್ಟೆಯ ಮೇಲೆ ಕುಳಿತಿದ್ದ ಅಜ್ಜಿಗೆ ಎಷ್ಟು ಸಲ ಕರೆ ಕೊಟ್ಟಳೋ ಸ್ವತಃ ಗಂಗಿಗೇ ಲೆಕ್ಕ ಸಿಕ್ಕಿಲ್ಲ. ''ಇದ್ಯಾಕೆ ಇವೊತ್ತು ಗಂಜೀ ಗ್ಯಾನಾನೂ ಇಲ್ಲ ಈ ಅಜ್ಜಮ್ಮಂಗೆ'' ಗಂಗೀ ಚಿಂತೆಗೀಡಾದಳು.

ಚಿಂತೆಯ ಮೂಟೆಯಂತೆ ತಾಯಮ್ಮ ಕಟ್ಟೆಯ ಮೇಲೆ ಕುಳಿತಿದ್ದಳು. ಕಣ್ಣುಗಳು ರಸ್ತೆಯಲ್ಲೇ ನೆಟ್ಟಿದ್ದವು. ''ಎದೆಯ ಮೇಲೆ ಮಾತ್ರ ಮಲ್ಲಿಗೆ ಯಾಕೆ ಕೆಂಪು ಕೆಂಪು. ಕಣ್ಣಲ್ಲೆರಡು ಕಲ್ಲು ಹರಳು ಮೈ ತಂಪು ತಂಪು ಏನಾದನೋ ಸವಾರ ಏನಾದನೋ ಸವಾರ'' ಹುಚ್ಚಮ್ಮ ಹಾಡುತ್ತಿದ್ದ ಹಾಡು. ಇವತ್ತು ಅವಳ ಎದೆ ಗೂಡೊಳಗೂ ತೂರಿಬಿಟ್ಟಿತ್ತು. ''ಥೂ ದರಿದ್ರದ್ದಾಡು ಕೇಳಿ ಕೇಳಿ ತಲೆಸೂಲೆ'' ಎಂದು ಗಟ್ಟಿಯಾಗೇ ಬೈದು ಕೊಂಡರೂ ಕೆಟ್ಟು ಹೋದ ಮುಳ್ಳು ಗ್ರಾಮಾಫೋನ್ ತಟ್ಟೆಯ ಮೇಲೆ ಸುತ್ತಿದ ಕಡೆಯೇ ಸುತ್ತಾತ್ತಾ ಅದೇ ಅದೇ ಹಾಡುವಹಾಗೆ ಇವಳ ತಲೆಯೊಳಗೂ ''ಏನಾದನೋ ಸವಾರ'' ಸುತ್ತುತ್ತಿತ್ತು.

ಇದ್ದಕ್ಕಿದ್ದಂತೆ ತಾಯಮ್ಮನ ಗುಡಿಸಿಲಿಗೆ ಸ್ವಲ್ಪ ದೂರದಲ್ಲಿ ಜಟಕಾಗಾಡಿಯೊಂದು ಬಂದು ನಿಂತಾಗ ಕ್ಕಾಬಿಕ್ಕಿಯಾದಳು ಅವಳು. ನಾಲ್ಕು ಜನ ಧಪಧಪನೆ ಇಳಿದು ಗಾಡಿಯೊಳಗಿಂದ ಒಂದು ದೇಹವನ್ನು ಹೆಣ ಎಳೆದಂತೆ ಎಳೆದು ಹೊತ್ತು ತಾಯಮ್ಮನ ಮನೆಯ ಕಡೆಯೇ ಧಾಪುಗಾಲು ಹಾಕಿದಾಗ ತಾಯಮ್ಮ ಹೃದಯ ಬಾಯಿಗೇ ಬಂದಂತೆ ಹೌಹಾರಿದಳು. ''ನಿನ್ಮಗ ಕಣಮ್ಮಾ, ನಾವು ಬೊಂಬೈಯಿಂದ ಬರ್ತಾ ಇದೀವಿ. ನಿನ್ಮಂಗೆ ಕೆಟ್ಟ ಕಾಯಿಲೆ ಬಂದೈತೆ. ಅದೆಂಥದೋ ಏಳಕೇ ಬರ್ದ ಕಾಯಿಲೆ ಏನಾದ್ರೂ, ಆಸು ಮನಗ್ ಸ್ತೀವಿ'' ತಾಯಮ್ಮ ಇದ್ದ ಬದ್ದ ಗೋಣಿ ತಾಟುಗಳನ್ನೋ ಸರಿಹೊಂದಿಸಿ ಹಾಸಿದಳು. ಮಗ ನರಳುತ್ತಾ ಮಲಗಿದ. ಎಂಥಾ ಕಟ್ಟುಮಸ್ತು ಆಳು. ಈಗ ಸಣಕಲ ಕಡ್ಡಿ ಆಗಿದ್ದ. ಮೈತುಂಬಾ ಗುಳ್ಳೆಗಳು ಬೇರೆ ಮುಖ ಜ್ವರದಿಂದ ಉರಿಯುತ್ತಿದೆ ಎನಿಸಿ ತಾಯಮ್ಮನಿಗೆ ಒಳಗಿದ್ದ ಕೋಪವೆಲ್ಲಾ ಕುದಿಯತೊಡಗಿ ಬಿಗಿದ ಬಾಯಿಯ ಒಳಗೇ ಬಯ್ಗಳು ಹೊರಳಾಡಿ 'ದರಿದ್ರ ಮಗನ್ನ ತಂದು ಸತ್ತಾರೂ ಓಗಿದ್ರ'' ಎನ್ನುವ ಮಾತುಗಳೇ ಮನದೊಳಗಿನ ಕಡೆಯ ವಾಕ್ಯವಾಗಿ, ಬಂದ ನಾಲ್ಕು ಜನವೂ ಹೊರಟು ಹೋದರೂ ಕತ್ತಲೇಕೆ ತುಂಬಿದೆ ಎಂದು ಕತ್ತೆತ್ತಿದ್ದರೆ, ಗಂಗಿ ಮತ್ತವಳ ತಂಗಿಯರು ಈ ಹೊಸ ಜೀವದ ಸುತ್ತ ತುಂಬಿರುವುದನ್ನು ಕಂಡು ತಕ್ಷಣ ತಾಯಮ್ಮನ ತಾಯಿ ಪ್ರಜ್ಞೆ, ಜಾಗೃತವಾಗಿ ಎಂಥದೋ ಕೆಟ್ಟ ಕಾಯಿಲೆ ಅಂದ್ರು, ಮಕ್ಕಳಿಗೇ ಬಡ್ಕೊಂಡ್ರೆ ಅನಿಸಿ ಕೈ ಝಾಡಿಸುತ್ತಾ ತೊಲಗ್ರೇ ರಂಡೇರಾ ಆಚ್ಗೆ ಎಂದು ಕರ್ಕಶವಾಗಿ ಕಿರುಚಿದಳು.

ಅವಳ ಕಿರುಚುವಿಕೆಗೆ ಸಹೊರಗಿನಿಂದ ಯಾರಮ್ಮ ಮನೇಲಿ ಎನ್ನುವ ಗಡಸುಧ್ವನಿ ಅಪ್ಪಳಿಸಿ ಎರಡೂ ಸ್ವರಗಳೂ ಒಂದಾಗಿ ಅಲ್ಲಿದ್ದ ಜೀವಿಗಳ ಕಿವಿಯಲ್ಲಿ ಗುಂಯ್‌ಗುಟ್ಟಿದವು. ತಾಯಮ್ಮ ಗಡಬಡಿಸಿ ಎದ್ದಳು. ಗುಡಿಸಲ ಹೊರಗಡೆ ಪೋಲೀಸರ ಆಗಮನವಾಗಿತ್ತು. ಅವರ ಹಿಂದೆ ಒಂದೇ ಮಾರು ಅಂತರದಲ್ಲಿ ಕೈಗೆ ಕೋಳ ತೊಡಿಸಿಕೊಂಡ ಮೊಮ್ಮಗನ ಎರಡೂ ರಟ್ಟೆಗಳನ್ನು ಇಬ್ಬರು ಪೋಲೀಸರು ಹಿಡಿದು ನಿಂತಿದ್ದರು. ''ನಿಮ್ಮನೆ ಶೋಧನೆ ಮಡ್ಬೇಕಮ್ಮ'' ಶಬ್ದಗಳು ಕಿವಿಗೆ ರಾಚಿದವೇ ವಿನಃ ಅದರೊಳಗಿನ ಅರ್ಥ ತಾಯಮ್ಮನನ್ನು ತಲುಪಲೇ ಇಲ್ಲ. ಗಂಗಿ ಅವಳ ತಂಗಿಯರೆಲ್ಲಾ ತೀರಾ ಬೆಪ್ಪಾಗಿ ಬಿರುಗಣ್ಣು ಬಿಟ್ಟ ಹಾಗೇ ನಿಂತಿದ್ದರು. ತಾಯಮ್ಮನ ಗಂಟಲಿಗೆ ದುಃಖ ಚೆಂಡಾಗಿ ನುಗ್ಗಿ ಅಲ್ಲೇ ವಾಸ್ತವ್ಯ ಹೂಡಿತು. ಮೊಮ್ಮಗನನ್ನು ಹಿಡಿದಿದ್ದ ಪೋಲೀಸ್ ಪೇದೆ ವರದಿ ಒಪ್ಪಿಸುವಷ್ಟೇ ನೀರಸವಾಗಿ ಹೇಳಿದ ''ಇವನು ಕೆಲಸ ಮಾಡುತ್ತಿದ್ದ ಟೀ ಏಜೆಂಟರನ್ನು ಕೊಂದು ಅವರ ಮನೆ ದೋಚಿದಾನಮ್ಮ. ಇವನೂ ಇವನ ಸ್ನೇಹಿತರೂ ಸಿಕ್ಕಿಬಿದ್ದಿದಾರೆ. ಕೆಲವು ಒಡವೆ ನಿಮ್ಮನೇಲಿ ಅಡಗಿಸಿಟ್ಟಿದ್ದಾನಂತೆ ಇವನೇ ಹೇಳಿದ''.

ಮುಂದೆ ನಡೆದದ್ದಕ್ಕೆ ತಾಯಮ್ಮ ಸಾಕ್ಷಿಯೂ ಆಗಿರಲಿಲ್ಲ. ಅವಳ ಬಿರುಗಣ್ಣುಗಳು ಏನನ್ನೂ ಸ್ವೀಕರಿಸುತ್ತಿರಲಿಲ್ಲ. ಅವರೆಲ್ಲಾ ಒಳನುಗ್ಗಿದ್ದು ಅಡಿಗೆ ಮನೆ ಚೆಲ್ಲಾಪಿಲ್ಲಿಯಾದದ್ದು, ಒಂದರ ಮೇಲೊಂದು ಜೋಡಿಸಿದ ನೀರಿನ ಮಡಕೆಯಲ್ಲಿ ಒಡವೆಗಳು ಸಿಕ್ಕಿದ್ದು ಯಾವೊಂದು ತನಗೂ ತನ್ನ ಬದುಕಿಗೂ ಏನೇನೂ ಸಂಬಂಧವಿಲ್ಲವೇನೋ ಎನ್ನಿಸುವ ಹಾಗೆ ಉರುಳಿಯೇ ಹೋಯಿತು. ಅವಳೊಳಗಿದ್ದ ಬಯ್ಗಳು ಬತ್ತಿ ಹೋದವು. ತಲೆಯಂತೂ ತೀರಾ ತೀರಾ ಖಾಲಿಯಾಗಿ ಬೆಳಗಿನಿಂದ ಹೊಟ್ಟೆಗೂ ಏನೂ ಇಲ್ಲದ್ದರಿಂದ ಕಣ್ಣು ಕತ್ತಲಿಟ್ಟಂತಾಗಿ ಪೋಲೀಸರು ಮೊಮ್ಮಗನನ್ನು ತಳ್ಳಿಕೊಂಡು ವ್ಯಾನಿನಲ್ಲಿ ಕುಳಿತು ಹೋದರೂ ಏನೂ ತಿಳಿಯದಂತೆ ನಿಂತಲ್ಲೇ ಕುಸಿದು, ಕುಸಿದಲ್ಲೇ ಮಲಗಿಬಿಟ್ಟಳು.

''ಅಜ್ಜಿ'' ಎಂದು ಕಿರುಚಿದ ಗಂಗಿ ನೀರು ತಂದು ತನಗೆ ತೋರಿದ ರೀತಿಯಲ್ಲಿ ಶೈತ್ಯೋಪಚಾರ ನಡೆಸಿದ್ದಳು. 'ಅಜ್ಜಿ' ಎಂದು ತಮ್ಮ ಊಟದ ಮೂಲವಾದ ಅಜ್ಜಿ ಸತ್ತೇ ಹೋದಳೋ ಎನ್ನುವಂತೆ ಗಂಗಿಯ ತಂಗಿಯರು ರೋದನ ನಡೆಸಿದರು, ಒಳಗಿನಿಂದ ತಾಯಮ್ಮನ ಮಗನ ನರಳಾಟವಾದ ''ಅಯ್ಯೋ ಅಮ್ಮ ಸತ್ತೇ'' ಮುಂತಾದವು ಹೊರಬಂದು ಗಂಗಿ ತಂಗಿಯರ ''ಅಜ್ಜೀ'' ರೋದನದ ಜೊತೆಗೂಡಿದವು. ಇದ್ಯಾವುದರ ಪರಿವೆಯೇ ಇಲ್ಲದ ಹುಚ್ಚಮ್ಮನ ಸಂಗೀತ ಕಟ್ಟೆಯ ಮೂಲೆಯಿಂದ ನಡೆದೇ ಇತ್ತು ''ಬಂದಾನೋ ಬಂದಾ ಸವಾರ ಯಾವ ಊರಿನ ಸರದಾರ''

- ಶಾಂತಾ ನಾಗರಾಜ್

ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಯೋಜನೆ

ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದು ಸಾಮಾಜಿಕವಾಗಿ ಶೋಷಿತರಾದವರ ಅಭಿವೃದ್ಧಿಗಾಗಿ ವಿಶೇಷ ಒತ್ತುಕೊಟ್ಟು ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿದಲ್ಲಿ ಮಾತ್ರ ಸಮಾನತೆ ಸಾಧಿಸುವುದು ಸಾಧ್ಯ. ಇದು ''ಸರ್ವೇಜನಾಃ ಸಖಿನೋಭವಂತು'' ಎಂಬ ಧ್ಯೇಯ ಈಡೇರಿಕೆಗೆ ಕಾರಣವಾಗುವುದು. ದೂರದೃಷ್ಟಿ ನಾಯಕ ಶ್ರೀ ಎಸ್. ಎಂ. ಕೃಷ್ಣ ಅವರ ನೇತೃತ್ವದಲ್ಲಿ ಪ್ರಸಕ್ತ ಸರ್ಕಾರದ ಮಹೋದ್ದೇಶವೇ ಇದು. ಈ ದಿಸೆಯಲ್ಲಿ ಸರ್ಕಾರ ಹಿಂದುಳಿದವರ, ಅಲ್ಪಸಂಖ್ಯಾತರ, ದೀನದಲಿತರ ಹಾಗೂ ಶೋಷಿತರ ಕಲ್ಯಾಣಕ್ಕಾಗಿ ನೂತನ ಕಾರ್ಯಕ್ರಮಗಳನ್ನು ರೂಪಿಸಿ. ಅನುಷ್ಠಾನಕ್ಕಿಳಿಸುವ ಮೂಲಕ ಅವರಲ್ಲಿ ಹೊಸ ಆಶಾಕಿರಣವನ್ನೇ ಮೂಡಿಸಿದೆ.

ಸಮಾಜ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಅಭಿವೃದ್ಧಿ :-

- ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ 6,10,733 ಫಲಾನುಭವಿಗಳಿಗೆ ರೂ. 86ಕೋಟಿ ನೆರವು.
- ಪ್ರಸಕ್ತಸಾಲಿನಲ್ಲಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ. 108.07 ಕೋಟಿ ಅನುದಾನ
- 20 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಂಜೂರು. ಒಟ್ಟು ಸಾಮರ್ಥ್ಯ 1,050 ವಿದ್ಯಾರ್ಥಿಗಳು.
- ಒಟ್ಟು ರೂ.585.49 ಲಕ್ಷಗಳ ವೆಚ್ಚದಲ್ಲಿ 40 ಮೆಟ್ರಿಕ್ - ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಪೂರ್ಣ 2,55,769 ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ರೂ. 271.42ಲಕ್ಷ 91,621 ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 257, 07ಲಕ್ಷ ವಿದ್ಯಾರ್ಥಿವೇತನ ವಿವರಣೆ.
- ರೂ. 532.37 ಲಕ್ಷಗಳ ಮೌಲ್ಯದ 1,67,340 ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಸೌಲಭ್ಯ.
- ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ರೂ. 22.10 ಲಕ್ಷಗಳ ವೆಚ್ಚದಲ್ಲಿ 442 ಫಲಾನುಭವಿಗಳಿಗೆ ಆರ್ಥಿಕ ಸಹಾಯ.
- 15,296 ಫಲಾನುಭವಿಗಳಿಗೆ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಮಗದ ಮೂಲಕ ರೂ. 2,119,17 ಲಕ್ಷ ಆರ್ಥಿಕ ನೆರವು.

ಅಲ್ಪಸಂಖ್ಯಾತರ ಅಭಿವೃದ್ಧಿ :-

- ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿಯೇ ಪ್ರಾತ್ಯೇಕ ಇಲಾಖೆ 1999-2000ನೇ ಸಾಲಿನಿಂದ ಕಾರ್ಯರಂಭ. ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯ ಕಾರ್ಯಕ್ರಮಗಳ ಜಾರಿಗಾಗಿ ರೂ. 263.40ಲಕ್ಷ ಅನುದಾನ ಬಿಡುಗಡೆ.
- ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ ಮತ್ತು ಬೆಳಗಾಂ ನಗರಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಸೌಲಭ್ಯಗಳಿಗಾಗಿ ರೂ. 60.00 ಲಕ್ಷಗಳ ವೆಚ್ಚ.
- ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗಾಗಿ ಬೆಂಗಳೂರು, ಮೈಸೂರು, ಧಾರವಾಢ, ಮಂಗಳೂರು ಮತ್ತು ಗುಲ್ಬಾರ್ಗಾ ನಗರಗಳಲ್ಲಿ 5 ವಿದ್ಯಾರ್ಥಿನಿಲಯಗಳ ಸ್ಥಾಪನೆ.
- ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅಲ್ಪಸಂಖ್ಯಾತ ಸ್ವಯಂಸೇವಾ ಸಂಸ್ಥೆಗಳಿಗೆ ಗರಿಷ್ಠ 5 ಲಕ್ಷ ಅನುದಾನ. ಈ ಉದ್ದೇಶಕ್ಕಾಗಿ ರೂ. 50 ಲಕ್ಷ ಮೀಸಲು.
- ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಐ.ಟಿ.ಐ / ಡಿಪ್ಲೋಮಾ ತರಗತಿಗಳ 840ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ರೂ. 9.25 ಲಕ್ಷ ಶಿಷ್ಯವೇತನ.
- 52 ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ
- ರೂ. 1,536,42 ಲಕ್ಷಗಳ ವೆಚ್ಚದಲ್ಲಿ 12,047 ಫಲಾನುಭವಿಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ನೆರವು.
- ಸಾಧಿಸಿದ್ದು ಬಹಳಷ್ಟು ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು

- ಕರ್ನಾಟಕ ವಾರ್ತೆ

ನೀರ್ಜಾ ಭಾನೋಟ್ - ಒಂದು ಸ್ಮರಣೆ

ಹದಿನೈದು ವರ್ಷಗಳ ಹಿಂದೆ ಇಪತ್ತಮೂರು ವರ್ಷದ ಗಗನಸಖಿ ನೀರ್ಜಾ, ತನ್ನ ಜೀವ ತೆತ್ತು ವಿಮಾನ ಅಪಹರಣಕಾರರ ಯೋಜನೆಯನ್ನು ವಿಫಲಗೊಳಿಸಿದಳು, ದಿಟ್ಟತನಕ್ಕೆ ಮತ್ತೊಂದು ಹೆಸರಾಗಿ ಅಮರಳಾದಳು.

ದಿನಾಂಕ 5 ಸೆಪ್ಟೆಂಬರ್ 1986ರ ಮುಂಜಾನೆ, ಪ್ಯಾನ್ ಅಮ್ ಫ್ಲೈಟ್ 73, ಮುಂಬಯಿಯಿಂದ ಅಮೆರಿಕಾಗೆ ಹೊರಟಿತ್ತು. ವಿಮಾನದಲ್ಲಿ 394 ಪ್ರಯಾಣಿಕರಿದ್ದರು. ಹಾರಾಟದ ಹಾದಿಯಲ್ಲಿ ನಿಗದಿತವಾದಂತೆ, ವಿಮಾನ ಕರಾಚಿಯಲ್ಲಿ ಇಳಿಯಿತು. ನೀರ್ಜಾ ವಿಮಾನದ ಬಾಗಿಲಿನಲ್ಲಿ ನಿಂತು ಪ್ರಯಾಣಿಕರನ್ನು ಸ್ವಾಗತಿಸುತ್ತಿದ್ದಳು. ಇದ್ದಕ್ಕಿದ್ದಂತೆ ನೀರ್ಜಾ ನೋಡುತ್ತಾಳೆ, ಒಂದು ಸುಜುಕಿ ವ್ಯಾನ್‌ನಲ್ಲಿ ಪಾಕಿಸ್ತಾನದ ವಿಮಾನ ನಿಲ್ದಾಣದ ರಕ್ಷಣಾ ಸಿಬ್ಬಂದಿಗಳ ನೀಲಿ ಸಮವಸ್ತ್ರವನ್ನು ತೊಟ್ಟ ನಾಲ್ಕು ಜನ ಸಶಸ್ತ್ರಧಾರಿಗಳು ವಿಮಾನದತ್ತ ಧಾವಿಸುತ್ತಿದ್ದಾರೆ. ಅವರು ಅಪಹರಣಕಾರರೆಂದು ತಕ್ಷಣ ನೀರ್ಜಾ ಗುರುತಿಸಿದಳು. ನೀರ್ಜಾ ಇಂಟರ್ಕಾಮ್ ಮೂಲಕ ಹೈಜಾಕ್ ಕೋಡ್ ಅನ್ನು ಉಚ್ಚರಿಸಿ ಕಾಕಪಿಟನಲ್ಲಿದ್ದ ವಿಮಾನ ಚಾಲಕರನ್ನು ಎಚ್ಚರಿಸಿದಳು. ಅಮೆರಿಕನ್ ಚಾಲಕರು ವಿಮಾನದಿಂದ ಹೊರಗೆ ಜಿಗಿದರು. ಇದೇಗ ನೀರ್ಜಾ ಈ ಅಪಾಯಕಾರಿ ಸನ್ನಿವೇಶದ ಪೂರ್ಣ ಹೊರೆ ಹೊತ್ತು, ಮುಂದಾಳಾಗಿ ನಿಂತಿದ್ದಳು. ಪ್ಯಾಲೆಸ್ಟೈನಿಯನ್ ಅಪಹರಣಕಾರರು, ವಿಮಾನದಲ್ಲಿ ಚಾಲಕರಿಲ್ಲ ಎಂದು ತಿಳಿದೊಡನೆ, ಮತ್ತೊಂದು ಚಾಲಕ ತಂಡವನ್ನು ಕರೆಸಿ ವಿಮಾನವನ್ನು ಸಿಪ್ರಸ್‌ಗೆ ಹಾರಿಸುವಂತೆ ಕೂಗಿದರು. ಅಪಹರಣಕಾರರು ಅಮೆರಿಕನ್ನರನ್ನೆಲ್ಲ ಒಂದೆಡೆ ಪ್ರತ್ಯೇಕಿಸುವಂತೆ ಕೇಳಿದಾಗ, ನೀರ್ಜಾ 44 ಜನ ಅಮೆರಿಕನ್ನರ ಪಾಸಪೋರ್ಟಗಳನ್ನು ಅವಿತಿಟ್ಟಳು. ಬೆಳಗಿನ 10 ಗಂಟೆಯ ಸಮಯ, ವಿಮಾನದಲ್ಲಿ ದೀಪ ಆರಿತು, ಇಡೀ ವಿಮಾನ ಕತ್ತಲೆಯಲ್ಲಿ ಮುಳುಗಿತು. ಭಯಭೀತರಾದ ಅಪಹರಣಕಾರರು ಎಲ್ಲೆಡೆಗೆ ಗ್ರೆನೇಡಗಳನ್ನು ತೂರಿ, ಗುಂಡಿನ ಮಳೆಗಳೆದರು. ಗುಂಡೊಂದು ನೀರ್ಜಾಳ ತೋಳನ್ನು ಹೊಕ್ಕಿತ್ತು ಆದರೂ ಆಕೆ ಪ್ರಯಾಣಿಕರನ್ನು ಪಾರು ಮಾಡಲು, ಬಾಗಿಲು ತೆರೆದು, ಅವರು ಹೊರಗೆ ಹೋಗಲು ಮಾರ್ಗದರ್ಶನ ನೀಡಿದಳು. ತಮ್ಮ ಅಪಹರಣ ವಿಫಲವಾಗಲು ನೀರ್ಜಾ ಕೂಡಾ ಕಾರಣ ಎಂದು ಅರಿತ ಅಪಹರಣಕಾರರು ಅವಳತ್ತ ಗುಂಡು ಹಾರಿಸಿದರು. ಈಕೆಯನ್ನು ಹೊಡೆದುರುಳಿಸಲು ನಾಲ್ಕು ಗುಂಡುಗಳು ಬೇಕಾದವು. ಅಷ್ಟು ಹೊತ್ತಿಗೆ ಬಹಳಷ್ಟು ಪ್ರಯಾಣಿಕರು ಸುರಕ್ಷಿತವಾಗಿ ತಪ್ಪಿಸಿಕೊಂಡಿದ್ದರು.

ಹದಿನಾರು ಗಂಟೆಗಳ ನಂತರ ಅಪಹರಣದ ಪ್ರಯತ್ನ ಕೊನೆಗೊಂಡಾಗ, ನೀರ್ಜಾ ಸೇರಿಂದತೆ 19 ಜನ ಸತ್ತಿದ್ದರು. 130 ಜನ ಗಾಯಗೊಂಡಿದ್ದರು. ನೀರ್ಜಾಳ ಧೈರ್ಯ, ಸಾಹಸ, ಸಮಯ ಪ್ರಜ್ಞೆ ಇಲ್ಲದಿದ್ದರೆ ಈ ಸಂಖ್ಯೆ ಬಹಳಷ್ಟು ದೊಡ್ಡದಿರುತ್ತಿತ್ತು. ಮರಣಾನಂತರ ನೀರ್ಜಾಗೆ ಭಾರತದ **ಅಶೋಕ ಚಕ್ರ**ವನ್ನು ಮತ್ತು ಪಾಕಿಸ್ತಾನದ **ತಗ್ಮೆ ಎ ಇನ್ಸಾಸಿಯತ್** ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಅಶೋಕ ಚಕ್ರ ಪಡೆದವರಲ್ಲಿಯೇ ಅತಿ ಕಿರಿ ವಯಸ್ಸಿನವರು, ಈಕೆ ನೀರ್ಜಾ ಪ್ಯಾನ್ ಅಮ್ ನಿಂದ ಪರಿಹಾರವಾಗಿ ದೊರೆತ ಎರಡು ಲಕ್ಷ ಡಾಲರಗಳಿಂದ ನೀರ್ಜಾ ಅವರ ಕುಟುಂಬ, ನೀರ್ಜಾ ಭಾನೋಟ್ ಟ್ರಸ್ಟ್ ಸ್ಥಾಪಿಸಿ, ಪ್ರತಿ ವರ್ಷ ಈಕೆಯ ಹೆಸರಿನಲ್ಲಿ ಎರಡು ಪ್ರಶಸ್ತಿಗಳನ್ನು ನೀಡುತ್ತಿದೆ. ತಮ್ಮ ಕರ್ತವ್ಯದ ಕರೆಯಾಚೆಗೂ ಕೈಚಾಚಿ ದಿಟ್ಟತನ ತೋರಿದ ವಿಶ್ವದ ಯಾವುದೇ ಏರಲೈನ್ಸನ ವಿಮಾನದ ಸಿಬ್ಬಂದಿಗೆ ಒಂದು ಪ್ರಶಸ್ತಿಯನ್ನು ನೀಡಲಾಗುತ್ತದೆ. ಜೊತೆಗೆ ವೈಯಕ್ತಿಕ ಬದುಕಿನಲ್ಲಿ ಹೋರಾಡಿ ಅದಕ್ಕೆ ಸಾರ್ವತ್ರಿಕ ರೂಪ ಕೊಟ್ಟ ದಿಟ್ಟ ಭಾರತೀಯ ಮಹಿಳೆಯನ್ನು ಗುರುತಿಸಿ ಇನ್ನೊಂದು ಪ್ರಶಸ್ತಿ ನೀಡಲಾಗುತ್ತದೆ. ಇಂದು ಜಗತ್ತು ಅಪಹರಣಕಾರರ, ಆತಂಕವಾದಿಗಳ ಬಿಗಿ ಮುಷ್ಟಿಯಲ್ಲಿ ಸಿಲುಕಿರುವಾಗ, ಬೇಕಿದ್ದಾರೆ ನೀರ್ಜಾರಂತಹ ದಿಟ್ಟೆಯರು. ಅಂತಹ ಓರ್ವ ದಿಟ್ಟ ಮಹಿಳೆ ಈ ಬಾರಿಯ ನೀರ್ಜಾ ಭಾನೋಟ್ ಪ್ರಶಸ್ತಿ ತಮಿಳು ನಾಡಿನ ಯಶೋದಾ.

ಈಕೆಯ ದಿಟ್ಟತನದ ತುಣುಕು ಸುದ್ದಿಗಳನ್ನು ಕೇಳಿ, ಈಕೆಯ ಬಗ್ಗೆ ಬಹಳಷ್ಟು ತಿಳಿಯುವ ಮಹದಾಸೆಯಿಂದ ಪ್ರತಿಯೊಂದು ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳನ್ನು ಕೊಂಡು ತಿರುವಿ ಹಾಕಿದ್ದಾಯ್ತು. 'ದಿ ವೀಕ್' ಪತ್ರಿಕೆಯೊಂದನ್ನು ಬಿಟ್ಟರೆ ಮತ್ತೆ ಯಾವ ಪತ್ರಿಕೆಯೂ ಯಶೋದ ಅವರ ಹೋರಾಟವನ್ನಾಗಲಿ, ಅವರಿಗೆ ದೊರೆತ ಪ್ರಶಸ್ತಿಯ ಬಗ್ಗೆಯಾಗಲಿ ತಲೆ ಕೆಡಿಸಿಕೊಂಡಿಲ್ಲ. ಮಿಸ್ ಇಂಡಿಯಾ, ಮಿಸ್ ಬೆಂಗಳೂರು, ಮಿಸ್ ಹಳ್ಳಿ, ಮಿಸ್ ಗಲ್ಲಿಗಳೂ ಪತ್ರಿಕೆಯ ಮುಖಪುಟಗಳಲ್ಲಿ ರಾರಾಜಿಸುತ್ತಾರೆ. ಆದರೆ ಮಹಿಳೆಯ ನಿಜವಾದ ಹೋರಾಟ, ಸಾಧನೆ, ಪತ್ರಿಕೆಗಳಿಗೆ ಮುಖಪುಟವಿರಲಿ, ಒಳಪುಟಗಳಲ್ಲಿ ಮೂಡಿಸುವಷ್ಟೂ, ದೊಡ್ಡ ವಿಷಯ ವಲ್ಲ. ಕಳೆದ ಸಂಚಿಕೆಯಲ್ಲಿಯೇ ಯಶೋದ ಅವರನ್ನು ಕುರಿತು ಅಚಲ ಬರೆದಿದ್ದರೂ ಯಶೋದ ಅವರ ಸಾಹಸಗಾಥೆಯ ಮತ್ತಷ್ಟು ವಿವರಗಳನ್ನು ಇಲ್ಲಿ ನೀಡುತ್ತಿದ್ದೇವೆ.

ಯಶೋದ ಓರ್ವ ದಲಿತ ವಿಧವೆ. ಹೋರಾಟಕ್ಕೆ ಇದ್ದೊಬ್ಬ ಮಗಳನ್ನು ಸೋದರಿಯನ್ನು ಬಲಿ ಕೊಟ್ಟ ನೋವು ಕಣ್ಣುಗಳಲ್ಲಿ ಮಡುಗಟ್ಟಿದ್ದರೂ, ಹೋರಾಟದ ಹಾದಿಯಿಂದ ಸ್ವಲ್ಪವೂ

ವಿಚಲಿತವಾಗದ ಮಹಿಳೆ. ತಮಿಳುನಾಡಿನ ತಿರುವಲ್ಲೂರ್ ಜಿಲ್ಲೆಯ ಸೆಂಟರ್ ಫಾರ್ ರೂರಲ್ ವಿಮೆನ್ಸ್ ಎಜುಕೇಷನ್ ಫಾರ್ ಲಿಬರೇಷನ್' (ಸಿ. ಆರ್.ಡಬ್ಲ್ಯು.ಇ.ಎಲ್) ಈಕೆಯ ಬದುಕನ್ನು ಬದಲಿಸಿತು. ಈಕೆ ಭೀಮನತೋಪೆ ಹಳ್ಳಿಯ ರೂರಲ್ ವಿಮೆನ್ಸ್ ಫ್ರಾಂಟ್ ನ (ಆರ್.ಡಬ್ಲ್ಯು.ಎಫ್) ಮುಖ್ಯಸ್ಥೆ. ತನ್ನ ಹಳ್ಳಿಯ ಮಹಿಳೆಯರ ಬದುಕನ್ನು ಸುಧಾರಿಸುವ ಸತತ ಹೋರಾಟ ಈಕೆಯದು.

ಸಿ.ಆರ್.ಡಬ್ಲ್ಯು.ಇ.ಎಲ್. ಪರಿಚಯವಾಗುವ ಮೊದಲು ದಲಿತರಿಗೆ ಹಳ್ಳಿಗಾಡಿನ ಬಡವರಿಗೆ, ಮಹಿಳೆಯರಿಗೆ, ಸಬಲೀಕರಣ ಎಂದರೇನು ಎಂದು ತಿಳಿದಿರಲಿಲ್ಲ. ಸಿ.ಆರ್.ಡಬ್ಲ್ಯು.ಇ.ಎಲ್. ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿಸಿತು. ಪಂಚಾಯತ್ ರಾಜ್ ಹೇಗೆ ಕೆಲಸ ಮಾಡುತ್ತದೆ ಎಂಬುದರ ಬಗ್ಗೆ ಅರಿವು ಮೂಡಿಸಿತು. ಮಹಿಳೆಯರಿಗೆ ಆಕಸ್ಮಾತ ಅವರನ್ನು ಬಂಧಿಸಿದರೆ, ಅವರ ಹಕ್ಕುಗಳೇನು ಎಂದೂ ವಿವರಿಸಿತು. ಸಿ.ಆರ್.ಡಬ್ಲ್ಯು.ಇ.ಎಲ್.ನ ಜಾಗೃತಿ ಯೋಜನೆಗಳು ಪರಿಸ್ಥಿತಿಯನ್ನು ಬದಲಿಸಿದವು. ತಮ್ಮ ಹಕ್ಕಿನ ಮೂಲಭೂತ ಸವಲತ್ತುಗಳಿಗಾಗಿ, ಕ್ಷೇಮಾಭಿವೃದ್ಧಿ ಯೋಜನೆಗಳಿಗಾಗಿ ಹೋರಾಡಲು ಮಹಿಳೆಯರು ಸಿದ್ಧರಾದರು. ಇದರಿಂದ ಅಧಿಕಾರಿಗಳಿಗಷ್ಟೇ ಅಲ್ಲ, ಅವರ ಮನೆಯ ಗಂಡಸರಿಗೂ ಅಸಮಾಧಾನವಾಯಿತು. ತಾವು ಪಡೆದ ಜ್ಞಾನದಿಂದ ಸ್ಫೂರ್ತಿಗೊಂಡ 32 ಮಂದಿ ಮಹಿಳೆಯರು, ಪಂಚಾಯತ್ ಚುಣಾವಣೆಗೆ ನಿಂತರು. ತಮ್ಮದೇ ಚಣಾವಣಾ ಘೋಷಣೆಗಳನ್ನು ಮ್ಯಾನಿಫೆಸ್ಟೋ ಗಳನ್ನು ಮುಂದಿಟ್ಟರು. ಇದರಲ್ಲಿ ಎಂಟು ಜನ ಚುನಾಯಿತರಾಗಿ ಬಂದರು.

ಹಳ್ಳಿಯ ಬಹಳಷ್ಟು ಕುಟುಂಬಗಳು ಹೆಂಡದ ದಾಸರಾದ ಗಂಡಸರಿಂದ ಹಾಳಾಗುತ್ತಿರುವುದನ್ನು ಯಶೋದ ಪ್ರತಿದಿನವೂ ಕಾಣುತ್ತಿದ್ದಳು. ಕಳ್ಳಬಟ್ಟಿಯನ್ನು ತಡೆಯಲು ಯಶೋದಾಳ ಮುಂದಾಳತ್ವದಲ್ಲಿ ಮಹಿಳೆಯರು ಹೊರಟಾಗ ಪರಿಸ್ಥಿತಿ ಬಹಳಷ್ಟು ಪ್ರಕೋಪಕ್ಕೆ ಹೋಯಿತು. ಪೋಲೀಸರು ಬರೀ ಬಾಯಿಮಾತಲ್ಲಿ ಬೆಂಬಲ ಸೂಚಿಸುತ್ತಿದ್ದರೇ ಹೊರತು, ಏನೊಂದು ಮಾಡುತ್ತಿರಲಿಲ್ಲ. ಯಶೋದ ಮತ್ತು ಆಕೆಯ ತಂಡ ಈ ಹೆಂಡದ ಕತೆ ಮುಗಿಸಲು ಹೊರಟರು. ಗಂಡಸರು ದಿನಾ 200 ಮಿಲಿ ಲೀಟರ್ ಹೆಂಡಕ್ಕೆ ಹತ್ತು ರೂಪಾಯಿ ತೆರುತ್ತಿದ್ದರು. ಹತ್ತು ರೂಪಾಯಿ ಈ ಬಡ ಕುಟುಂಬಗಳಿಗೆ ಬಲು ದೊಡ್ಡ ಮೊತ್ತ. ಹೆಂಡದ ಹಾವಳಿಯನ್ನು ಕಂಡ, ಯಶೋದ ಸುಮ್ಮನಿರದಾದಳು, ಮೊದಲು ಈಕೆಯ ಮುಂದಾಳತ್ವದಲ್ಲಿ ಆರ್.ಡಬ್ಲ್ಯು.ಎಫ್. ಕಳ್ಳಬಟ್ಟಿಯನ್ನು ನಿಲ್ಲಿಸುವಂತೆ ಬೇಡಿಕೊಂಡಿತು. ಒಳ್ಳೆಯ ಮಾತುಗಳಿಂದ ಫಲ ದೊರೆಯದಾಗ, ಉಳಿದ ಮಾರ್ಗ ಕಳ್ಳು ಮಾಡುವ ತಾಣಗಳಿಗೆ ಲಗ್ಗೆ ಇಡುವುದು. ಅವಿತಿಟ್ಟ ಹೆಂಡದ ಹಂಡೆಗಳನ್ನು ಗಡಿಗೆಗಳನ್ನು ಧ್ವಂಸ ಮಾಡುವುದು, ಹೆಂಡದ ದೊರೆಗಳಿಗೆ ಸಿಟ್ಟು ನೆತ್ತಿಗೇರಿತು.

ಕಳೆದ ವರ್ಷ ಡಿಸೆಂಬರ್ 6ನೇ ತಾರಿಖು, ಯಶೋದ ಮತ್ತೊಂದು ಹೆಂಡದ ತಾಣವನ್ನು ಲಗ್ಗೆ ಇಡಲು ಹೊರಟಿದ್ದಳು. ಈಕೆಯ ಮೇಲೆ ಆಕ್ರಮಣ ಮಾಡಿ ತೀವ್ರವಾಗಿ ಗಾಯಗೊಳಿಸಲಾಯಿತು. 20 ವರ್ಷದ ಮಗಳು ಇಂದಿರಾ, ತಾಯಿಯ ಸಹಾಯಕ್ಕೆ ಧಾವಿಸಿದಳು. ಈಕೆಯನ್ನು ಕತ್ತರಿಸಿ ಹಾಕಿದರು. ಅಕ್ಕ ರತ್ನಾ ಇಂದಿರಾಳ ಸಹಾಯಕ್ಕೆ ಬಾಗಿದಳು, ಈಕೆಯ ತಲೆಯನ್ನು ದೊಡ್ಡ ಕಲ್ಲಿನಿಂದ ಜಜ್ಜಲಾಯಿತು. ರತ್ನಾ ತಾಣದಲ್ಲಿಯೇ ಪ್ರಾಣ ಬಿಟ್ಟಳು. ಹಳ್ಳಿಯ ಮೇಲ್ಜಾತಿಯ ಜನ ಸತ್ತವರನ್ನು ಗಾಯಗೊಂಡವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲು ತಮ್ಮ ಟ್ರಾಕ್ಟರ್ ಕೊಡಲು ನಿರಾಕರಿಸಿದರು.

ಮಗಳನ್ನು ನೆನೆದೊಡನೆ ಈ ತಾಯಿಯ ಕಣ್ಣುಗಳು ಅಗಾಧ ನೋವಿನ ಕುಳಿಗಳಾಗುತ್ತದೆ. ಆ ದಿನ ತನ್ನ ಹೋರಾಟವನ್ನು ಬಿಟ್ಟು ಬಿಡಲು ಯಶೋದ ಯೋಚಿಸಿದಳೆ ? ಎಂತಹವರ ಎದೆಯನ್ನೂ ನಡುಗಿಸುವ ಘಟನೆಯಿದು. ನನ್ನ ಒಬ್ಬಳೇ ಮಗಳನ್ನು ಕಳಕೊಂಡಿದ್ದೇನೆ. ನನ್ನ ಅಕ್ಕನನ್ನು ಕಳಕೊಂಡಿದ್ದೇನೆ. ಅವರ ತ್ಯಾಗ ವ್ಯರ್ಥವಾಗಲು ಬಿಡುವುದಿಲ್ಲ. ನನ್ನ ಕೊನೆಯುಸಿರಿರುವರೆಗೂ ಹೋರಾಡುತ್ತೇನೆ ಎನ್ನುತ್ತಾರೆ ಯಶೋದ.

ಈ ಆಕ್ರಮಣ ಮತ್ತು ಕೊಲೆಯ ಹಿಂದೆ ಸಾಕಷ್ಟು ರಾಜಕೀಯ ಬೆಂಬಲವಿದೆ ಎಂದು ಹಳ್ಳಿಯವರು ನಂಬುತ್ತಾರೆ. ಒಂದೇ ಒಂದು ರಾಜಕೀಯ ಪಕ್ಷವಾಗಲಿ, ಮುಖಂಡರಾಗಲಿ, ಕೊಲೆಗಡುಕರ ವಿರುದ್ಧ ಉಸಿರೆತ್ತಲಿಲ್ಲ. ದಲಿತ ಪಾರ್ಟಿಗಳೆಂದು ಹೇಳಿಕೊಳ್ಳುವವರೂ ಬಾಯಿ ಬಿಗಿದುಕೊಂಡಿದ್ದರು. ಆದರೆ ಯಶೋದ ನ್ಯಾಯಕ್ಕಾಗಿ ತನ್ನ ಹೋರಾಟ ನಿಲ್ಲಿಸಲಿಲ್ಲ, ಇಂದು ಅಪರಾಧಿಗಳು ಜೈಲಿನಲಿದ್ದಾರೆ. ಆದರೆ ಯಶೋದಳ ಮೇಲೆ, ತನ್ನ ಕೇಸುಗಳನ್ನು ಹಿಂತೆಗೆದುಕೊಳ್ಳುವಂತೆ ಎಲ್ಲಿಲ್ಲದ ಒತ್ತಡವಿದೆ. ಲಕ್ಷ ರೂಪಾಯಿ ಕೊಡುತ್ತೇವೆ ಕೇಸು ಹಿಂದಕ್ಕೆ ತೆಗೆದುಕೊ ಎಂದು ಬಂದು ಪೀಡಿಸುವವರುಂಟು . ಯಶೋದ ಯಾವುದಕ್ಕೂ ಬಲಿಯಾಗದೆ, ಬಿಗಿಯಾಗಿದ್ದಾರೆ. ಯಶೋದ ಅವರ ಈ ದಿಟ್ಟತನದ ಹೋರಾಟ ಈಕೆಗೆ ಈ ಬಾರಿಯ ನೀರ್ಜಾ ಭಾನೋಟ್ ಪುರಸ್ಕಾರ ತಂದು ಕೊಟ್ಟಿದೆ. ಒಂದೂವರೆ ಲಕ್ಷ ರೂಪಾಯಿಗಳ ಪುರಸ್ಕಾರವಿದು. ಈಕೆಯನ್ನು 80 ಜನರ ಪಟ್ಟಿಯಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಕೂಲಿ ಕಾರ್ಮಿಕರಿಗೆ ಹುಟ್ಟಿದ ಯಶೋದ ಚಿಕ್ಕ ವಯಸ್ಸಿಗೇ ಗಂಡನನ್ನು ಕಳೆದುಕೊಂಡಳು. ತನ್ನ ಕುಟುಂಬದ ಹೊಟ್ಟೆ

ಹೊರೆಯಲು ಕೂಲಿ ಕೆಲಸ ಮಾಡುತ್ತಿದ್ದ ಈಕೆ ಆರ್.ಡಬ್ಲ್ಯು.ಎಫ್. ಚಳುವಳಿಗೆ ಸೆಳೆಯಲ್ಪಟ್ಟಳು. ಸಂಘ ನನಗೆ ಆತ್ಮ ಗೌರವವನ್ನು ಕೊಟ್ಟಿತು. ಆತ್ಮವಿಶ್ವಾಸವನ್ನು ಕೊಟ್ಟಿತು. ಬದುಕಿಗೆ ದಿಕ್ಕು ತೋರಿತು, ಎನ್ನುತ್ತಾರೆ ಯಶೋದ. 'ಆರ್.ಡಬ್ಲ್ಯು.ಎಫ್.ನ ಚಿನ್ನಪೊನ್ನಮಾಲಗೆ ಕ್ಯಾನ್ಸರ್ ಬಡಿದಾಗ, ಆತ ಯಶೋದ ಅವರನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ. ಈಕೆಯ ಬದುಕಿನ ಬಲು ದೊಡ್ಡ ಅವಕಾಶವದು. ಭೀಮನತೋಪೆಯ ಆರ್.ಡಬ್ಲ್ಯು.ಎಫ್.ನ ಮುಖ್ಯಸ್ಥಳಾದ ಯಶೋದ ಅತ್ಯಂತ ಉತ್ಸಾಹದಿಂದ ದಿಟ್ಟತನದಿಂದ ತನ್ನ ಕೆಲಸಕ್ಕೆ ಧುಮುಕಿದಳು. ಹಳ್ಳಿಯವರಿಗೆ ತಮ್ಮ ಭೂಮಿಯ ಪತ್ರಗಳನ್ನು ಪಡೆಯಲು, ರೇಷನ್ ಕಾರ್ಡ್ ಪಡೆಯಲು, ಪಿಂಚಣಿ ಹಣವನ್ನು ಪಡೆಯಲು ಅಪಘಾತದಲ್ಲಿ ಪರಿಹಾರವನ್ನು ಪಡೆಯಲು ಸಹಾಯ ಮಾಡಿದಳು. ಈಕೆಯ ಮುಂದಾಳತ್ವದಲ್ಲಿ ಬಸ್ಸು ನಿಲ್ದಾಣವೊಂದು ನಿರ್ಮಾಣವಾಯ್ತು. ಹಳ್ಳಿಯಲ್ಲಿ ಜಾತಿ-ಜಾತಿಗಳ ನಡುವಿನ ಬಿಕ್ಕಟ್ಟು ಕುಗ್ಗಿತು.

ಇಂದಿಗೂ ಯಶೋದ ತನ್ನ ಈ ಕೆಲಸಗಳನ್ನು ಮುಂದುವರೆಸುತ್ತಿದ್ದಾಳೆ. ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುತ್ತಾಳೆ. ಏರುತ್ತಿರುವ ದ್ವಿಪತ್ನಿತ್ವ ಪ್ರಕರಣಗಳನ್ನು ತಡೆಯುವತ್ತ, ವರದಕ್ಷಿಣೆ ಸಾವುಗಳನ್ನು ಇಲ್ಲವಾಗಿಸುವತ್ತ ಹೋರಾಟವನ್ನು ಅಹಿಂಸಾತ್ಮಕ ರೀತಿಯಲ್ಲಿ ಬಿಡದೆ ಮುಂದುವರೆಸಲು ಕರೆ ನೀಡುತ್ತಾಳೆ. ಈ ಹೋರಾಟದಲ್ಲಿ ಹುತಾತ್ಮರಾದ ತನ್ನ ಮಗಳು ಮತ್ತು ಅಕ್ಕನ ಹೆಸರಿನಲ್ಲಿ ಪ್ರತಿ ಡಿಸೆಂಬರ್ 6 ರಂದು **ಇಂದ್ರಾ, ರತ್ನ ಪ್ರಶಸ್ತಿ** ನೀಡಲು ಈಕೆ ಯೋಚಿಸಿದ್ದಾಳೆ. ನೀರ್ಜಾ ಭಾನೋಟ್ ಪ್ರಶಸ್ತಿಯಿಂದ ಬಂದ ಹಣ ಆದಾಗಲೆ ಈ ಕಾರ್ಯಕ್ಕೆ ತೊಡಗಿದೆ. ಮತ್ತಷ್ಟು ಹಣವನ್ನು ಕೂಡಿಸಲು ಶ್ರಮಿಸುತ್ತಿದ್ದಾಳೆ.

ತನ್ನ ಹಳ್ಳಿಯನ್ನು ಕಳ್ಳಬಟ್ಟಿಯಿಂದ ಮುಕ್ತಗೊಳಿಸುವ ಈಕೆಯ ಹೋರಾಟ ನಿಂತಿಲ್ಲ. ನಾನು ಬಹುಶಃ ನನ್ನ ಮಗಳು ಇಂದಿರಾ ಮತ್ತು ಸೋದರಿ ರತ್ನಾಳ ತರಹ ಹೋರಾಡುತ್ತಾ ಸಾಯುತ್ತೇನೆ ಎನ್ನುತ್ತಾಳೆ ಯಶೋದ. ನಾವು ಪ್ರತಿಯೊಬ್ಬರೂ ನಮ್ಮ ಯುದ್ಧಗಳಲ್ಲಿ ಹೋರಾಡಬೇಕು. ಬೇರೆ ಯಾರೋ ಅವನ್ನು ಹೋರಾಡಿ ನಮಗೆ ಗೆಲುವು ತಂದು ಕೊಡುವುದಿಲ್ಲ. ಸಾವಿನ ಬಗ್ಗೆ ನನಗೆ ಚಿಂತೆ ಇಲ್ಲ, ನಾವು ಬದುಕುವುದು ಒಮ್ಮೆ ಮಾತ್ರ ಎನ್ನುತ್ತಾರೆ ಯಶೋದ.

ಹೋರಾಟಕ್ಕೆ ತಮ್ಮ ಇಡೀ ಬದುಕನ್ನೆ ಪಣಕಿಟ್ಟ ಯಶೋದ, ನಮ್ಮ ಕಾಡು ಹಳ್ಳಿಯ ಅನಕ್ಷರಸ್ಥ ಮಹಿಳೆಯರಲ್ಲೂ ಜ್ವಲಂತವಾಗಿ ಉರಿವ ಸ್ತ್ರೀಶಕ್ತಿಯ ಶ್ರೇಷ್ಠ ಉದಾಹರಣೆಯಾಗಿದ್ದಾರೆ.

●

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :

Smt/Sri

CPMG/KA/BG-8/2001
Book-Post/News Letter